50-20-5

ಕುವೈತ್ ಕನ್ನಡ ಕೂಟ

# ಮರಳ ಮಲ್ಲಿಗೆ

January - 2012

www.kuwaitkannadakoota.org




## ಹಾಸ್ಯ-ಲಾಸ್ಯ ಸಂಚಿಕೆ

ಮುಡಿಸಿರಿ ಕಂಪಿಗೆ ಕಣ್ಮನ ತಂಪಿಗೆ


RITHVIK


KARTHIK.S.K.
9TH STD.


Rithvik


CAPTIAN AMERICA
SHARAN


SAVE TIGERS
KEERTHAN S.K.
3RD STD.


TRANSFORMERS
SHARAN

# ಅಧ್ಯಕ್ಷರ ಸಮಾರೋಪ ಸಲ್ಲಾಪ..

ಈ ವರ್ಷದ ಸಮಾರೋಪ ಕಾರ್ಯಕ್ರಮವಾಗಿ ವರ್ಷಾಂತ್ಯ ಸಮಾರಂಭ, ಕ್ರಿಸ್ ಮಸ್, ಹೊಸವರ್ಷ ಮತ್ತು ಸಂಕ್ರಾಂತಿಗಳ ಸಮ್ಮಿಲನ ಹರ್ಷಾಚರಣೆಯಲ್ಲಿ ಅಂತ್ಯಗೊಳ್ಳುತ್ತಿದೆ. ಈ ವರ್ಷದ ಕಾರ್ಯಕಾರಿ ಸಮಿತಿ ತನ್ನ ಸಾಮರ್ಥ್ಯ ಮೀರಿ ಕೂಟದ ಕಾರ್ಯಕ್ರಮಗಳನ್ನು ಆಯೋಜಿಸಲು ಪ್ರಯತ್ನಿಸಿದೆ ಮತ್ತು ಇದರಲ್ಲಿ ಬಹುಪಾಲು ಸಫಲತೆಯನ್ನೂ ಕಂಡಿದೆ. ಕಾರ್ಯಕಾರಿ ಸಮಿತಿಯ ನನ್ನ ಮಿತ್ರರ ಮತ್ತವರ ಕುಟುಂಬದ ಸದಸ್ಯರ, ಇತರ ಕಾರ್ಯ ನಿರ್ವಾಹಕ ಸಮಿತಿಗಳ ಸಂಚಾಲಕ ಮತ್ತು ಸಮಿತಿ ಸದಸ್ಯರ ಅಭೂತಪೂರ್ವ ಸಹಾಯ ಸಹಕಾರ ಈ ಯಶಸ್ಸಿಗೆ ಕಾರಣವಾಗಿದೆ. ಮರಳ ಮಲ್ಲಿಗೆ ಪೂರ್ವಯೋಜನೆಯಂತೆ ಆರು ಸಂಚಿಕೆಗಳನ್ನು ಹೊರತರಬೇಕಿತ್ತು ಆದರೆ ಕಾರಣಾಂತರಗಳಿಂದ ಮತ್ತು ರಾಜ್ಯೋತ್ಸವ ಹಾಗೂ ಒಳಾಂಗಣ ವಿಹಾರ ಕಾರ್ಯಕ್ರಮಗಳ ಮಧ್ಯೆ ಹೆಚ್ಚು ಸಮಯಾಂತರವಿಲ್ಲದ ಕಾರಣ ವರ್ಷಾಂತ್ಯ ಸರ್ವಸಭೆ ಸಂಚಿಕೆಯೊಂದಿಗೆ ಮಂಗಳ ಹಾಡುವುದಾಗಿ ನಿರ್ಧರಿಸಲಾಯಿತು. ಎಲ್ಲಾ ಸಂಚಿಕೆಗಳು ಉತ್ತಮವಾಗಿ ಮೂಡಿಬರಲು ಮರಳಮಲ್ಲಿಗೆ ಮತ್ತು ವೆಬ್ ಸಮಿತಿಗಳು ಅವಿರತವಾಗಿ ಕಾರ್ಯನಿರ್ವಹಿಸಿದ್ದಾರೆ. ಶ್ರೀಮತಿ ಸುಗುಣ ಮಹೇಶ್ ಮತ್ತು ಶ್ರೀ ಅಮೃತ್ ರಾಜ್ ಸ್ವಯಾಸಕ್ತಿಯಿಂದ ಕೂಟದ ಅಂತರ್ಜಾಲದ ಚಾಲನೆಯಲ್ಲಿ ಮುತುವರ್ಜಿ ವಹಿಸಿದ್ದೇ ಅಲ್ಲದೇ ಸಕಾಲಕ್ಕೆ ನವೀಕೃತಗೊಳಿಸಿ ಮರಳ ಮಲ್ಲಿಗೆ ಪತ್ರಿಕೆಯನ್ನೂ ಅಂತರ್ಜಾಲದಲ್ಲಿ ಅಳವಡಿಸುವ ಕಾರ್ಯ ನಿರ್ವಹಿಸಿದ್ದಾರೆ. ಅವರಿಗೆ ಕಾರ್ಯಕಾರಿ ಮತ್ತು ಮರಳ ಮಲ್ಲಿಗೆ ಹಾಗೂ ವೆಬ್ ಸಮಿತಿ ವತಿಯಿಂದ ಧನ್ಯವಾದ ತಿಳಿಸಲಿಚ್ಛಿಸುತ್ತೇನೆ.

ಈ ವರ್ಷದ ಹೊಸ ಸೇರ್ಪಡೆ ಅಂತರ ಶಾಲಾ ಪ್ರತಿಭಾ ಸ್ಪರ್ಧೆ (ಟ್ಯಾಲೆಂಟ್ಸ್ ಶೋ) ನಿರೀಕ್ಷೆಗಿಂತಾ ಉತ್ತಮ ಮಟ್ಟದಲ್ಲಿ ಆಯೋಜಿತಗೊಂಡಿದ್ದು ಇದನ್ನು ಇನ್ನೂ ಉತ್ತಮ ವ್ಯಾಪ್ತಿಯಲ್ಲಿ ಮುಂದುವರೆಸಿಕೊಂಡು ಹೋಗುವ ಮೂಲಕ ಕು.ಕ.ಕೂ. ದ ಕಾರ್ಯಕ್ರಮಗಳು ವಿಸ್ತೃತಗೊಳ್ಳುವಂತೆ ಮಾಡುವುದು ಮುಂಬರುವ ಸಮಿತಿಗಳನ್ನು ಅವಲಂಬಿಸಿರುತ್ತದೆ. ಕೂಟದ ಎಲ್ಲಾ ಸದಸ್ಯರಿಗೂ ಕ್ರಿಸ್ ಮಸ್ ಮತ್ತು ಹೊಸವರ್ಷದ ಹಾಗೂ ಆನಂತರದ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇವೆ. ಎಲ್ಲಾ ಸಮಿತಿಗಳಿಗೆ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲಾ ಸದಸ್ಯರಿಗೆ, ಮಕ್ಕಳಿಗೆ, ಕೂಟದ ಮಹಿಳೆಯರಿಗೆ ಮತ್ತು ವಿಶೇಷವಾಗಿ ಪ್ರಾಯೋಜಕರ ಮೂಲಕ ಆರ್ಥಿಕ ನೆರವು ದೊರಕಿಸಿಕೊಟ್ಟ ಸದಸ್ಯರಿಗೆ ನಮ್ಮ ಆಭಾರಗಳನ್ನು ವ್ಯಕ್ತಪಡಿಸುತ್ತಾ ನಮ್ಮಿಂದ ಆಗಿರಬಹುದಾದ ಲೋಪ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇನೆ.

ಜೈ ಹಿಂದ್
ಜೈ ಕರ್ನಾಟಕ.

ನಾಗರಾಜ್ ಸುಬ್ಬರಾವ್
(ಆಧ್ಯಕ್ಷರು, ಕು.ಕ.ಕೂ.)

# ಮರಳ ಮಲ್ಲಿಗೆ - ನನ್ನುಡಿ



**ಒಲವಿನ ಓದುಗರೆ!**

ವರ್ಷದ ಪಯಣದುದ್ದಕ್ಕೂ ಮ.ಮ. ಸಮಿತಿ ಸದಸ್ಯರು ನನ್ನ ಕಾಟ ಸಹಿಸಿ ಕೊಂಡಷ್ಟೇ ಸಹನೆಯಿಂದ ನೀವೆಲ್ಲಾ

ನಮ್ಮ ಸೃಜನಶೀಲ ಲೇಖಕರ ಕೊರೆತಗಳನ್ನೂ ಮನಸ್ಸಿಲ್ಲದ ಮನಸ್ಸಿನಿಂದ ಓದಿರ್ತೀರಿ, ಇಲ್ಲಾ ಓದಿದ ಹಾಗೆ ಮಾಡಿರ್ತೀರಿ ಅಲ್ವಾ? ಅಂದ ಹಾಗೆ ಹಾಸ್ಯ–ಲಾಸ್ಯ ಸಂಚಿಕೆಯಲ್ಲಿ ಎಷ್ಟು ಹಾಸ್ಯ ಇದೆಯೋ ಗೊತ್ತಿಲ್ಲ, ಆದರೆ ಲಾಸ್ಯ ಅಂತೂ ಇದೆ ..?? ಏನಿದು ಲಾಸ್ಯ ಅಂತಾನಾ..? ಅದೇ ಕಣ್ರೀ ಶೃಂಗಾರ ಭರಿತ ಲಘು ಹಾಸ್ಯ..!! ಅಂದ್ರೆ ಬರೆದಿರೋದಕ್ಕೆ ನಗು ಬಾರದೇ ಇದ್ರೂ ಲೇಖನದ ಕೊನೆಗೆ ನಕ್ಕೇ ಬಿಡ್ತೀರ..!! ಡಿ.ವಿ.ಜಿ. ಹೇಳಿರುವಂತೆ ನಗುವುದು ಸಹಜದ ಧರ್ಮ ನಗಿಸುವುದು ಪರಧರ್ಮ ನಗುವ ಕೇಳುತ ನಗುವುದತಿಶಯದ ಧರ್ಮ, ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ಮಿಗೆ ಬೇಡಿಕೊಳ್ಳೋ ಮಂಕುತಿಮ್ಮ– ಈ ಹೊನ್ನುಡಿ ಪಾಲನೆ ಜೀವನ ಜಂಜಾಟದ ಮಾನಸಿಕ ಒತ್ತಡಗಳಿಂದ ಹೊರ ಬರಲು ಸಂಜೀವಿನಿಯಂತೆ ಕೆಲಸ ಮಾಡಬಲ್ಲದು ಎನ್ನುವುದು ವೈಜ್ಞಾನಿಕವಾಗಿ ಸಾಧಿಸಿ ತೋರಿಸಲಾಗಿದೆ. ನಗು ಸರ್ವರೋಗ ನಿವಾರಕ ಎನ್ನುವುದನ್ನು ನೆನಪಿಡುವಂತೆ ಪ್ರೇರೇಪಿಸುವ ದಿಕ್ಕಿನತ್ತ ಮರಳ ಮಲ್ಲಿಗೆಯ ಪ್ರಯತ್ನದ ಫಲವೇ ಈ “ಹಾಸ್ಯ–ಲಾಸ್ಯ” ಸಂಚಿಕೆ...

ಈ ಮರುಳುಗಾಡಿನ ಕುವೈತನಲ್ಲಿ, ಕನ್ನಡ ಕೂಟದ ಬನದಲ್ಲಿ ಅರಳಿರುವ ಮರಳ ಮಲ್ಲಿಗೆಯ ಸುವಾಸನೆಯು ವರುಷ ವರುಷವೂ, ಹೆಚ್ಚಾಗಿ ಹರಡುತ್ತಾ ತನ್ನ ಕಂಪನ್ನು ಎಲ್ಲಾ ದಿಕ್ಕುಗಳಲ್ಲಿಯೂ ಬೀರುತ್ತಿದೆ. ಪ್ರತಿ ಸಂಚಿಕೆಯಲ್ಲೂ ಹೊಸ ಹೊಸ ಪುಟ್ಟ ಪುಟ್ಟ ಪ್ರತಿಭೆಯ ನವ ಚಿಗುರಿನ ಮಲ್ಲಿಗೆ ಮೊಗ್ಗುಗಳು ಅರಳಿ, ಕನ್ನಡ ಕೂಟ ಬನದ ಸೊಬಗನ್ನು ಹೆಚ್ಚಿಸುತ್ತಿವೆ. ಅದಕ್ಕೆ ಪೂರಕವಾಗಿ ಕಾರ್ಯಕಾರಿ ಸಮಿತಿಯ ಪ್ರೋತ್ಸಾಹ, ಮನ್ನಣೆ ಹಾಗೂ ಮರಳ ಮಲ್ಲಿಗೆ ಸಮಿತಿಯ ಪ್ರೀತಿ ವಾತ್ಸಲ್ಯ ಸ್ನೇಹಭರಿತ ಒಡನಾಟ ಉತ್ಸಾಹದ ಚಿಲುಮೆಯಾಗಿ ಉತ್ತಮ ಮಾರ್ಗದರ್ಶನಕ್ಕೆ ಎಡೆಯಾಗಿದೆ. ಇಂತಹ ಅಪರೂಪದ ಕನ್ನಡ ಕೂಟದ ಮರಳ ಮಲ್ಲಿಗೆ ಪುಷ್ಪಗುಚ್ಛದಲ್ಲಿ ಇನ್ನೂ ಹೆಚ್ಚಾಗಿ ನವನವೀನ, ಕಲಾತ್ಮಕ, ಸೃಜನಾತ್ಮಕ, ಪ್ರೇರಣಾತ್ಮಕ, ಪ್ರೀತಿ ಬಾಂಧವ್ಯವನ್ನು ಪಸರಿಸುವ ಪ್ರತಿಭೆಗಳು ಹಾಗೂ ಅರಳು ಮಲ್ಲಿಗೆಗಳು ಶಾಂತಿ ಸೌಹಾರ್ದದ ಪ್ರತೀಕವಾಗಿ ಕನ್ನಡ ಮಲ್ಲಿಗೆ ಸೌರಭ ಸುವಾಸನೆ ದಿಗಂತದ ಎಲ್ಲೆಡೆಯಲ್ಲೂ ಹಬ್ಬಲಿ ಎಂದು ಹಾರೈಸುತ್ತೇನೆ. ಹೊಸವರ್ಷದ ಹಾರ್ದಿಕ ಶುಭಾಶಯಗಳೊಂದಿಗೆ..... ಶೈಲಜ ಹೊಂಬಾಳಿ.

ಮರಳ ಮಲ್ಲಿಗೆ ತನ್ನ ಪಯಣದ ಹಾದಿಯಲ್ಲಿ ಹಲವು ಆಯಾಮಗಳನ್ನು ಕಂಡಿದೆ. ಈ ವರ್ಷದ ಹಾದಿಯೂ ಅಂತಹುದೇ ವಿಶೇಷಗಳಿಂದ ಕೂಡಿತ್ತು. ಮಕ್ಕಳ ಮತ್ತು ಹಿರಿಯರ ಶೃಜನಶೀಲತೆಯ ಪ್ರದರ್ಶನಾ ವೇದಿಕೆ ಅಣಿಯಾಗುತ್ತಿರುವಂತೆಯೇ ಚಿತ್ರ ಕಲೆ ಮತ್ತು ಛಾಯಾಚಿತ್ರಗ್ರಹಣ ಸೃಜನಶೀಲತೆಗೂ ಈ ವರ್ಷ ಪ್ರಾಮುಖ್ಯತೆ ನೀಡಲಾಯಿತು. ಪುಟ್ಟ ಪ್ರತಿಭೆಗಳೂ ಈ ದಿಕ್ಕಿನಲ್ಲಿ ಹೆಚ್ಚು ಹೆಚ್ಚು ಆಸಕ್ತಿ ತೋರುತ್ತಿರುವುದು ಅವರ ಸರ್ವತೋಮುಖ ಬೆಳವಣಿಗೆಯ ಸೂಚಕವಾಗಿದೆ, ಇದು ಮರಳ ಮಲ್ಲಿಗೆ ಮತ್ತು ಕು.ಕ.ಕೂ. ಗೆ ತೃಪ್ತಿಕರ ಅಂಶ. ಇನ್ನೂ ಹೆಚ್ಚು ಹೆಚ್ಚು ಮಕ್ಕಳು ತಮ್ಮ ಪಠ್ಯದೊಡನೆ ಪಠ್ಯೇತರ ಚಟುವಟಿಕೆಗಳಲ್ಲೂ ಆಸಕ್ತಿ ತೋರುವಂತೆ ಮಾಡುವಲ್ಲಿ ಮರಳ ಮಲ್ಲಿಗೆ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದೆ ಎನ್ನುವುದು ನನಗೆ ಹೆಮ್ಮೆಯ ವಿಷಯ. ಈ ಗುಣ ಎಲ್ಲರಲ್ಲೂ ಇನಷ್ಟು ವೃದ್ಧಿಯಾಗಲಿ ಎಂದು ಆಶಿಸಿ, ಕೂಟದ ಮತ್ತು ಮರಳ ಮಲ್ಲಿಗೆಯ ಮುಂದಿನ ಪಯಣಕ್ಕೆ ಶುಭ ಕೋರುತ್ತಾ ಹೊಸವರ್ಷದ ಹಾರ್ದಿಕ ಶುಭಾಶಯಗಳೊಂದಿಗೆ...ಯೋಗಿ ತುಮಕೂರ್

## ಆಚರಣಾ ಮಲ್ಲಿಗೆ

# ಮರಳ ಮಲ್ಲಿಗೆ ಮಂಜೂಷ

ಮಾನವ ಕುಲದ ಏಳಿಗೆಗಾಗಿ ಭೂಮಿಗೆ ದೇವ ದೂತರ ಆಗಮನವಾಗಿರುವುದು ಪ್ರಮುಖ ಧರ್ಮಗಳೆಲ್ಲಾ ಒಪ್ಪುವ ಮಾತೇ. ದೇವಾವತಾರಗಳು ಎನ್ನುವುದು ಸನಾತನ ಹಿಂದೂ ಧರ್ಮದ ನಿಲುವಾದರೆ ದೇವನ ದೂತರಾಗಿ ಮಾನವೋತ್ತಮರ ಜನನ ಆಗಿದೆ ಎನ್ನುವುದು, ಆ ನಂತರದ ವಿವಿಧ ಧರ್ಮಗಳ ನಂಬಿಕೆ. ಈ ನಿಟ್ಟಿನಲ್ಲಿ ಕ್ರಿ.ಪೂ ೪ ನೇ ವರ್ಷ ಏಸು ಕ್ರಿಸ್ತನ ಜನನವಾಗಿರಬಹುದು ಎನ್ನುವುದು ಕೆಲವು ದಾಖಲೆಗಳ ಮೂಲಕ ತಿಳಿದುಬಂದಿದೆ.  ದಿನಾಂಕವೂ ಜನವರಿ ೬ ಎಂದು ಉಲ್ಲೇಖಿಸಲಾಗಿದೆ. ಆದರೆ ಕ್ರಿಸ್ಚಿಯನ್ ಧರ್ಮಗುರುಗಳು ಮತ್ತು ದಾಖಲೆಗಳ ಪ್ರಕಾರ ಅದು ಡಿಸೆಂಬರ್ ೨೫ ಎನ್ನಲಾಗಿದೆ. ಪಾಶ್ಚಿಮಾತ್ಯ ಚರ್ಚುಗಳ ಈ ಕೆಳಗಿನ ದಾಖಲೆ ಡಿಸೆಂಬರ್ ೨೫ ದೇವದೂತ ಕ್ರಿಸ್ತನ ಜನ್ಮದಿನವೆಂದು ಸಾರುತ್ತದೆ.

Telesphorus, the second bishop of Rome (129-138), ordained that “in the holy night of the Nativity of our Lord and Savior, they do celebrate public church services, and in them solemnly sing the Angels’ Hymn, because also the same night he was declared unto the shepherds by an angel, as the truth it self doth witness.” Theophilus, who was Bishop of Caesarea during this same period, urged that “the observance or celebration of the birthday of our Lord [be held] on what day soever the 25 of December shall happen”.

ಡಿಸೆಂಬರ್ ೨೫ ರ ರಾತ್ರಿ ಪವಿತ್ರ ರಾತ್ರಿಯೆಂದೂ, ಅಂದೇ ಮಾನವ ಕುಲೋದ್ಧಾರಕ ಏಸು ಪ್ರಭುವಿನ ಜನನವಾಯಿತು ಎನ್ನಲಾಗಿದೆ. ೨೫, ಡಿಸೆಂಬರ್ ಲ್ಯಾಟಿನ್ ಸಮಮಾಸ ೨೫ ಕಿಸ್ಲೆವ್ ಎನ್ನಲಾಗಿದ್ದು ಬಹುಶಃ ಇದು ಕ್ರಿ.ಪೂ ೪ ರ ಜನವರಿ ೬ಕ್ಕೆ ಆಗಿದ್ದಿರಬಹುದು ಎನ್ನಲಾಗಿದೆ. ಏಕೆಂದರೆ ಇದು ಬ್ಯಾಬಿಲೋನಿಯನ್ ೨೫ ಕಿಸ್ಲೆವ್ ಗೆ ಸರಿಹೊಂದುತ್ತದೆ. ಹೀಗಾಗಿ ಆಧುನಿಕ ಡಿಸೆಂಬರ್ ೨೫ ಕ್ಕೆ ಪಾರಂಪರಿಕ ಮತ್ತು ಧಾರ್ಮಿಕ ಮಹತ್ವ ಕೊಟ್ಟು ಅದನ್ನೇ ದೇವದೂತ ಏಸು ಕ್ರಿಸ್ತನ ಜನ್ಮ ದಿನವೆಂದು ಮಾನ್ಯ ಮಾಡಲಾಗಿದೆ. ಹಾಗಾಗಿ ಪ್ರಪಂಚದಾದ್ಯಂತ ಕ್ರಿಶ್ಚಿಯನ್ ಬಾಂಧವರಲ್ಲದೇ ಇತರ ಮತಾವಲಂಬಿಗಳೂ ಕ್ರಿಸ್‌ಮಸ್ ಆಚರಿಸುತ್ತಾರೆ.

## ಕ್ರಿಸ್ಮಸ್ ಸುತ್ತ ಕೆಲವು ಸ್ವಾರಸ್ಯಗಳು

(ಸುದ್ದಿ: ಕನ್ನಡ. ಒನ್.ಇನ್)

ಜಗತ್ತಿನ ಪ್ರತಿ ಚರ್ಚ್, ಕ್ರಿಶ್ಚಿಯನ್ನರ ಮನೆಗಳಲ್ಲಿ ಕ್ರಿಸ್ಮಸ್ ಸಂದರ್ಭದಲ್ಲಿ ಕ್ರಿಸ್ಮಸ್ ಗಿಡವನ್ನು ನೆಡದೆ ಹಬ್ಬವನ್ನು ಆಚರಿಸುವುದೇ ಇಲ್ಲ. ವಿಭಿನ್ನ ಬಣ್ಣದ ವಿದ್ಯುದ್ದೀಪ, ಅಲಂಕಾರಿಕ ವಸ್ತುಗಳಿಂದ ಸಿಂಗರಿಸಿ ಅದನ್ನು ಮುಟ್ಟಿ ಕಣ್ತುಂಬಿಸಿ ಕೊಳ್ಳುವವರೇ ಎಲ್ಲಾ. ಕ್ರಿಸ್ಮಸ್ ಗಿಡ ಹಬ್ಬಕ್ಕೊಂದು ಶೋಭೆ. ಆದರೆ ಜಪಾನಿನಲ್ಲಿ ನೆಟ್ಟಿರುವ ಅಲ್ಲ, ತಯಾರಿಸಲಾಗಿರುವ ಕ್ರಿಸ್ಮಸ್ ಗಿಡ ವಿಭಿನ್ನ ಕಾರಣದಿಂದ ಸುದ್ದಿಯಾಗಿದೆ. ಭೂಮಿಯ ಎಲ್ಲೆಲ್ಲೂ ಆ ಗಿಡದ್ದೇ ಮಾತುಕತೆ. ಏನೈತಿ ಅದರಲ್ಲಿ ಅಂಥಾದ್ದೇನೈತಿ ಅಂತೀರಾ? ಚಿನ್ನ ಅಂದರೆ ಬಾಯಿ ಬಾಯಿ ಬಿಡುವವರು ಬಾಯಿಬಿಟ್ಟೇ ಇರುವಂತೆ ಇಡೀ ಗಿಡವನ್ನು ಬಂಗಾರದಲ್ಲಿ ಸೃಷ್ಟಿಸಲಾಗಿದೆ. ಇದನ್ನು ತಯಾರಿಸುವವರ ಹುಚ್ಚು ಅಂದರೂ ಪರವಾಗಿಲ್ಲ. ಆದರೆ, ಬಾಗದಿದ್ದರೂ ಬೀಗುತ್ತಿರುವ ಗಿಡ ಮಾತ್ರ ಜಗತ್ತಿನ ಅತ್ಯಂತ ದುಬಾರಿ ಕ್ರಿಸ್ಮಸ್ ಗಿಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ವರ್ಷದ ಮತ್ತು ಪ್ರಪಂಚದ ಅತ್ಯಂತ ದುಬಾರಿ ಕ್ರಿಸ್ಮಸ್ ಗಿಡವನ್ನು ಜಪಾನಿನ ಚಿನ್ನಾಭರಣ ತಯಾರಕರಾದ 'ಜಿಂಝಾ ತನಕ' ರೂಪಿಸಿದ್ದಾರೆ. ಸತತ ಹತ್ತು ವರ್ಷಗಳಿಂದ ಈ ಕ್ರಿಸ್ಮಸ್ ಗಿಡದ ತಯಾರಿ ನಡೆದಿದ್ದು, ಈ ವರ್ಷ ಪ್ರದರ್ಶನಕ್ಕೆ ಇಡಲಾಗಿದೆ. ಯಾರೂ ಮನಸಿನಲ್ಲಿಯೂ ಊಹಿಸಿ ಕೊಳ್ಳಲು ಸಾಧ್ಯವಿಲ್ಲದಷ್ಟು ಅಲಂಕಾರದೊಂದಿಗೆ ಗಿಡ ರಚಿತವಾಗಿದೆ.  ಈ ಕ್ರಿಸ್ಮಸ್ ಗಿಡದಲ್ಲಿ ಏನಂಥ ವಿಶೇಷ? ಇದನ್ನು ಅಪ್ಪಟ 24 ಕ್ಯಾರೆಟ್ ಚಿನ್ನದಿಂದ ರೂಪಿಸಲಾಗಿದೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಈ ಗಿಡ 2.4 ಮೀಟರ್ ಉದ್ದ, 12 ಕಿಲೋ ಗ್ರಾಂ ತೂಕವಿದೆ. ಪ್ಲೇಟ್, ಹೃದಯಾಕಾರ, ರಿಬ್ಬನ್‌ಗಳಿಂದ ಅಲಂಕೃತಗೊಂಡಿದೆ. ಎಲ್ಲವೂ ಚಿನ್ನದಲ್ಲೇ !!. ಈ ಚಿನ್ನದ ಗಿಡದ ನಿಖರ ಬೆಲೆ 2 ಮಿಲಿಯನ್ ಡಾಲರ್. ಯಪ್ಪೋ!!

(ಸುದ್ದಿ: ಕನ್ನಡ.ಒನ್.ಇನ್) ಚರ್ಚು, ಕ್ರಿಸ್ತ ಧರ್ಮದಲ್ಲೂ ನಕ್ಕುನಗಿಸುವ ಹಾಸ್ಯ ಪ್ರಸಂಗಗಳು ಇವೆ. ನೆಟ್ ಲೋಕದಲ್ಲಿ ಹುಡುಕಿ ನಿಮಗೊಂದು ಪುಟ್ಟ ಬರಹವನ್ನು ಕನ್ನಡದಲ್ಲಿ ನೀಡಲಾಗಿದೆ. ನಗು ಬಂದರೆ ನಕ್ಕು ಬಿಡಿ. ಇಲ್ಲದಿದ್ದರೆ ಇದರಲ್ಲಿ ಯಾವುದಾದರೂ ನೀತಿಯಿದೆಯೇ ಹುಡುಕುತ್ತಲಿರಿ.

ಅದೊಂದು ಚರ್ಚು. ತೀವ್ರ ಹಣಕಾಸಿನ ಬಿಕ್ಕಟ್ಟಿಗೆ ಒಳಗಾಯಿತು. ಅನಿವಾರ್ಯವಾಗಿ ಆ ಚರ್ಚಿನಲ್ಲಿದ್ದ ಹತ್ತು ಸಾವಿರ ಬೈಬಲುಗಳನ್ನು ಮಾರಾಟ ಮಾಡಲು ಪಾದ್ರಿ ನಿರ್ಧರಿಸಿದರು. ಇದಕ್ಕೆ ಮೂರು ಸ್ವಯಂಸೇವಕರನ್ನು ನಿಯೋಜಿಸಲಾಯಿತು. ಅವರ ಹೆಸರು ಜಾಕ್, ಪೌಲ್ ಮತ್ತು ಲೂಯಿ. ಪಾದ್ರಿಗೆ ಜಾಕ್ ಮತ್ತು ಪೌಲ್ ಮೇಲೆ ದೃಢ ನಂಬಿಕೆಯಿತ್ತು. ಇವರಿಬ್ಬರು ವೃತ್ತಿಪರ ಮಾರಾಟಗಾರರು. ಆದರೆ ಲೂಯಿ ಪಾಪದ ಹುಡುಗ. ಆತ ರೈತನ ಮಗ. ಆದರೂ ಆತನನ್ನೂ ಬೈಬಲ್ ಮಾರಾಟಕ್ಕೆ ಕಳುಹಿಸಿದರು. ಒಂದು ವಾರ ಕಳೆದ ಬಳಿಕ ಮೂವರು ಪಾದ್ರಿ ಬಳಿಗೆ ಬಂದರು. ಜಾಕ್ 200 ಡಾಲರನ್ನು ಪಾದ್ರಿಗೆ ಕೈಗಿಟ್ಟು, 20 ಬೈಬಲ್ ಮಾರಿದ್ದಾಗಿ ತಿಳಿಸಿದ. ಪಾದ್ರಿಗೆ ಖುಷಿಯಾಯಿತು. "ನೀನು ನಿಜಕ್ಕೂ ಉತ್ತಮ ಮಾರಾಟಗಾರ. ನಮ್ಮ ಚರ್ಚಿಗೆ ನಿನ್ನ ಅಗತ್ಯವಿದೆ" ಎಂದರು. ನಂತರ ಪೌಲ್, ದುಡ್ಡಿದ್ದ ಕವರನ್ನು ಪಾದ್ರಿಗೆ ನೀಡಿದ. ನಾನು 28 ಬೈಬಲ್ ಮಾರಾಟ ಮಾಡಿದೆ. ಇದರಲ್ಲಿ 280 ಡಾಲರ್ ಹಣ ಸಂಗ್ರಹಿಸಿದೆ. ಪಾದ್ರಿಗೆ ಮತ್ತೂ ಖುಷಿಯಾಯಿತು. "ನಿಜಕ್ಕೂ ನೀನು ವೃತ್ತಿಪರ ಮಾರಾಟಗಾರ. ನಿನ್ನ ಮೇಲೆ ಭಗವಂತನ ಆಶೀರ್ವಾದ ಯಾವತ್ತೂ ಇರಲಿ" ಎಂದರು. ಸರಿ ಇವರಿಬ್ಬರ ಮಾರಾಟ ಉತ್ತಮವಾಗಿದೆ. ಪಾಪದ ಹುಡುಗ ಒಂದೆರಡಾದರೂ ಮಾರಾಟ ಮಾಡಿರಬಹುದೇ?! ಎಂದು ಪಾದ್ರಿಗೆ ಕುತೂಹಲವಿತ್ತು. "ಲೂಯಿ ನೀನು ಎಷ್ಟು ಬೈಬಲ್ ಮಾರಾಟ ಮಾಡಿದ್ದೀ?" ಪಾದ್ರಿ ಪ್ರಶ್ನಿಸಿದರು. ಲೂಯಿ ಮೌನವಾಗಿ ದೊಡ್ಡ ಕವರೊಂದನ್ನು ಪಾದ್ರಿಗೆ ನೀಡಿದ. ಪಾದ್ರಿ ಕವರ್ ತೆರೆದು ನೋಡಿದಾಗ ಅಲ್ಲಿ ದುಡ್ಡಿನ ರಾಶಿಯೇ ಇತ್ತು. ಲೆಕ್ಕ ಮಾಡಿ ನೋಡಿದಾಗ 3 ಸಾವಿರಕ್ಕಿಂತಾ ಹೆಚ್ಚು ಡಾಲರ್ ಸಂಗ್ರಹವಾಗಿತ್ತು. "ಲೂಯಿ ಏನಿದು. ಒಂದು ವಾರದಲ್ಲಿ ಅಷ್ಟೂ ಪುಸ್ತಕಗಳನ್ನು ಮನೆ ಮನೆಗೆ ಮಾರಿ ಇಷ್ಟು ದುಡ್ಡು ಸಂಗ್ರಹಿಸಿದೆಯಾ?" ಎಂದು ಪಾದ್ರಿ ದೊಡ್ಡ ಸ್ವರದಲ್ಲಿ ಆಶ್ಚರ್ಯಸೂಚಕವಾಗಿ ಕೇಳಿದಾಗ, ಲೂಯಿ ಮೌನವಾಗಿ ಹೌದೆಂದು ತಲೆಯಲ್ಲಾಡಿಸಿದ.

"ಇದು ಸಾಧ್ಯವೇ ಇಲ್ಲ" ಜಾಕ್ ಮತ್ತು ಪೌಲ್ ಕಿರುಚಿದರು. ನಮ್ಮಂತಹ ವೃತ್ತಿಪರರಿಗೆ ಇಷ್ಟು ಕಷ್ಟವಾಗಿರುವಾಗ ನಮಗಿಂತ ಹತ್ತು ಪಟ್ಟು ಹೆಚ್ಚು ಮಾರಾಟ ಮಾಡಲು ಈ ಮುಗ್ಧ ರೈತನ ಮಗನಿಗೆ ಸಾಧ್ಯವೇ ಇಲ್ಲ ಎಂದು ವಾದಿಸಿದರು. ಇವರ ಮಾತಿಗೆ ಪಾದ್ರಿ ಕೂಡ "ಹೌದು ಇಷ್ಟು ಮಾರಾಟ ಮಾಡಲು ಇವನಿಗೆ ಕಷ್ಟ" ಎಂದರು. ಸರಿ ನೀನು ಹೇಗೆ ಮಾರಾಟ ಮಾಡಿದ್ದು? ಮನೆ ಮನೆ ಬಾಗಿಲಿಗೆ ಹೋಗಿ ಏನು ಹೇಳಿದೆ? ಎಂದು ಪಾದ್ರಿ ಕೇಳಿದರು. ಅದಕ್ಕೆ ಲೂಯಿ ಹೀಗೆಂದ.

"ನಾ.... ನಾ..... ನು ಎಲ್ಲರ ಮ...ಮ...ನೆಯ ಬಾಗಿಲು ತಟ್ಟಿ ಅವರಲ್ಲಿ ಹೇಳುತ್ತಿ..ದ್ದೆ.... ಹತ್ತು.... ಡಾಲ...ರ್ ನೀಡಿ..... ಈ ಬೈಬಲ್.... ಖರೀ...ದಿಸುವಿರಾ.... ಅದು ನಿಮಗೆ ಸಾಧ್ಯ....ವಾಗದಿದ್ದರೆ... ಈ... ಬೈಬಲ...ನ್ನು ಇಲ್ಲೇ...... ನಿ..ಮಗಾ...ಗಿ... ಇಲ್ಲೇ ..... ಓದಿ... ಹೇಳು..ತ್ತೇನೆ.. ದಯಾ...ಮಯಿ.. ಯಾದ.. ತಂ..ದೆ ಏಸುಕ್ರಿಸ್ತ....

ನಾನು ಹೀಗೆ ಶುರು ಮಾಡಿದಾಗ ಅವರೆಲ್ಲಾ ದೂಸರಾ ಮಾತನಾಡದೇ ಬೈಬಲ್ ಖರೀದಿಸುತ್ತಿದ್ದರು" ಎಂದು ರೈತನ ಮಗ ಹೇಳಿದ. ಜಾಕ್, ಪೌಲ್ ಮತ್ತು ಪಾದ್ರಿ ಬೆಕ್ಕಸಬೆರಗಾಗಿ ಲೂಯಿಯನ್ನೇ ನೋಡುತ್ತಿದ್ದರು.

## ಹೀಗೂ ಆಗಬಹುದು

**-ಮರಳ ಮಲ್ಲಿಗೆ ಮಂಜೂಷ ಮಂಥನ**

ನಮಸ್ಕಾರ... ನಮಸ್ಕಾರ... ನಮಸ್ಕಾರ......
ಇದೇನಪ್ಪಾ ಸೀನ-ಸುಬ್ಬನ್ನ ಇಲ್ಲಿಗೂ ಬಿಡ್ತಿದ್ದಾರಾ? ಮಮ ತಂಡ ಅನ್ಬೇಡಿ...!! ಏನಂದ್ರಿ ? ಮ.ಮ. ಅಂದ್ರೇನು ಅಂದ್ರಾ.... ?? ಮರಳ ಮಲ್ಲಿಗೆ ಸಮಿತಿ ಕಣ್ರೀ..., ಹೋಗ್ಲಿ ನಮ್ಮ ಮಂತ್ರ ಗೊತ್ತಾ ನಿಮಗೆ?... ಈ ತಿಂಗಳ ಸಂಚಿಕೆಯ ಹಿನ್ನೆಲೆಯಲ್ಲಿ...????

ಪೂಜ್ಯಾಯ ನಗುವಾಯ, ಹಾಸ್ಯ ಧರ್ಮ ರತಾಯಚ
ಭಜತಾಂ ಕಚಗುಳಿಯಾಯ ನಮತಾಂ ಕಾಮಡೀನುವೇ
(ಶ್ರೀ ಶ್ರೀ ಶ್ರೀ ರಾಘವೇಂದ್ರರ ಕ್ಷಮೆ ಕೋರಿ, ಅವರೂ ಈ ಮಂತ್ರ ಕೇಳಿ ಮುಸಿ ಮುಸಿ ನಗ್ತಿರಬೇಕು..ಹಹಹಹ)

ಮರಳ ಮಲ್ಲಿಗೆ ವಿವಿಧ ಬಣ್ಣಗಳಲ್ಲಿ ಗೋಚರಿಸಲು ನಿಮ್ಮ ಸಹಾಯ ಸಹಕಾರ ಸದಾ ನಮಗೆ ಸಿಗುತ್ತಿದೆ, ಹಾಗಾಗಿ ಈ ಮರಳ ಮಲ್ಲಿಗೆಗೆ ಹಾಸ್ಯ-ಲಾಸ್ಯದ ಲೇಪನ ಕೊಡುವುದು ನಮ್ಮ ಉದ್ದೇಶ. ಪ್ರತಿ ಸಂಚಿಕೆಯಂತೆ ಈ ಸಂಚಿಕೆಯೂ ನಿಮ್ಮ ಮನ್ನಣೆಗೆ ಪಾತ್ರವಾಗಲಿ ಎನ್ನುವುದೇ ನಮ್ಮ ಆಶಯ.

ಮೊನ್ನೆ ಒಬ್ರು ಕೇಳಿದ್ರು... ಅಲ್ಲಾ ಡಾಕ್ಟ್ರೇ ಮೀನಲ್ಲಿ ಗಂಡು ಹೆಣ್ಣು ಅಂತ ಇರುತ್ವಾ..??
ನಾನಂದೇ ..ಅಲ್ಲಾ ರೀ ಗಂಡು ಹೆಣ್ಣು ಅಂತ ಇಲ್ದೇ ಇದ್ರೆ ಮೀನು ಮರಿ ಎಲ್ಲಿಂದ ಬರ್ತವೆ? ಅವು ಏನು ಉದ್ಭವ ಕೂಸುಗಳೇ..?? ಮನುಷ್ಯ ಮತ್ತಿತರ ಪ್ರಾಣಿಗಳಲ್ಲಿ ಇರುವ ಹಾಗೆ ಮೀನಲ್ಲೂ ಗಂಡು ಹೆಣ್ಣು ಇರುತ್ತವೆ.
ಅದಕ್ಕೆ ಅವರು, ಮತ್ತೆ ಗಂಡು ಹೆಣ್ಣು ಅಂತ ಹೇಗೆ ಪತ್ತೆ ಹಚ್ತೀರಾ...? ಮತ್ತೆ ಸಂತಾನೋತ್ಪತ್ತಿ ಹ್ಯಾಗೆ ಆಗುತ್ತೆ....??
ನನಗೆ ಇವರ ಪ್ರಶ್ನೆ ಮಜಾ ಅನ್ನಿಸ್ತು..

ಅಲ್ಲಾ ಕಣ್ರೀ.. ಮೀನಿನ ಸಂತಾನೋತ್ಪತ್ತಿ ಆಗೋಕೆ ಗಂಡು ಮೀನಿಗೆ ಗೊತ್ತಾದ್ರೆ ಸಾಕು ಹೆಣ್ಣು ಮೀನು ಯಾವುದು ಅಂತ...ನನಗೆ ಗೊತ್ತಾದ್ರೆ ಎಷ್ಟು, ಬಿಟ್ಟರೆಷ್ಟು?? ಅವು ತಮ್ಮ ಸ್ವಾಭಾವಿಕ ಕಾರ್ಯ ಮುಂದುವರಿಸುತ್ವೆ, ಅಂತ ಹೇಳಿದೆ...

ಆದ್ರೆ ನಾನು ಯಾಕೋ ಉದ್ಧಟತನ ತೋರಿದೆ ಅನ್ನಿಸ್ತು.. ನನಗೆ ತಿಳಿದಿರೋದ್ರಿಂದ ಅವರು ಕೇಳ್ತಿದ್ದಾರೆ. ಪಾಪ ಅವರದೇನು ತಪ್ಪು...?? !! ಅಂದ್ಕೊಂಡು ಉತ್ತರ ಕೊಡೋಣ ಅನ್ನುವಾಗ್ಲೇ ಅವ್ರೇ ಕೇಳಿದ್ರು..

"ಅಲ್ಲ ಸರ್ ನನ್ನ ಮಗ ನಾಲ್ಕನೇ ಕ್ಲಾಸಲ್ಲಿದ್ರೂ ಬಹಳ ಪ್ರಶ್ನೆ ಕೇಳ್ತಾನೆ. ಕೆಲವೊಮ್ಮೆ ನಮಗೆ ಏನು ಉತ್ತರ ಕೊಡ್ಬೇಕೋ ಗೊತ್ತಾಗೊಲ್ಲ ನೋಡಿ... ಹಾಗೇ ಮೊನ್ನೆ ಈ ಪ್ರಶ್ನೆ ಕೇಳ್ದ.. ಅಪ್ಪಾ, ಮೀನಲ್ಲಿ ಗಂಡು ಹೆಣ್ಣು ಅಂತ ಗುರ್ತು ಹಿಡಿಯೋದು ಹೇಗೆ..?? ಅಂತ. ನಾನು ಹೇಳಿದೇ, ಮಗ ಮೊಟ್ಟೆ ಹಾಕುತ್ತಲ್ಲಾ ಅದೇ ಹೆಣ್ಣು, ಮೊಟ್ಟೆ ಹಾಕದೇ ಇರೋದು ಗಂಡು. ಅಂತ ನನಗೆ ತಿಳಿದಹಾಗೆ ನನಗನ್ನಿಸಿದಷ್ಟು ಉತ್ತರ ಹೇಳಿದೆ. ಅದಕ್ಕೆ ಅವನು ಮೊಟ್ಟೆ ಇಡೋ ಸಮಯ ಆದರೆ ಓಕೆ..ಬೇರೆ ಸಮಯದಲ್ಲಿ..?? !! ಅಂತ ಕೇಳಿ ನನಗೆ ತಲೆ ಚಿಟ್ಟು ಹಿಡಿಸಿಬಿಟ್ಟ.. ಎಂದರು.

ಮೀನಲ್ಲೂ (ಕೆಲವು ಮೀನಲ್ಲಿ) ದ್ವಿತೀಯ ಲಿಂಗ ಲಕ್ಷಣಗಳು ಕಂಡುಬರುತ್ತವೆ. ಉದಾಹರಣೆಗೆ ಬಣ್ಣಗಳು ಆಕರ್ಷಕವಾಗಿರುವ ಹೆಣ್ಣುಗಳು, ಕ್ಲಾಸ್ಪರ್ ಎನ್ನುವ ಹೊರಕಾಣುವ ಗಂಡು ಮೀನಿನ (ಶಾರ್ಕ್ ಮೀನಿನಲ್ಲಿ) ಪುರುಷಾಂಗ, ಸಾಲ್ಮನ್ ಗಂಡು ಮೀನುಗಳಲ್ಲಿ ಚಾಚಿರುವ ಚೂಪಾದ ಹೊರತುಟಿ, ಅಥವಾ ಒಂಟೆಯಂತೆ ಎತ್ತರದ ಬೆನ್ನುಭಾಗ, ಇತ್ಯಾದಿ. ಲೈಂಗಿಕ ಪಕ್ವಗೊಂಡ ಮತ್ತು ಹೊರಭಾಗಕ್ಕೆ ಬರಿಗಣ್ಣಿಗೆ ಗುರುತಿಸಲಾಗದ ಮೀನುಗಳಲ್ಲಿ ರೆಕ್ಕೆ ಮುಟ್ಟಿನೋಡಿ ಬಲುನಯ ರೆಕ್ಕೆಯ ಮೀನನ್ನು ಹೆಣ್ಣೆಂದೂ, ಒರಟಾದ ರೆಕ್ಕೆಯ ಮೀನನ್ನು ಗಂಡೆಂದೂ ಗುರುತಿಸಬಹುದು... ಇತ್ಯಾದಿ, ಅಂತ ಈ ಮೂಲಕ ತಿಳಿಸೋಣವೇ.

ಮಕ್ಕಳ ಕುತೂಹಲ ಅಥವಾ ಜಿಜ್ಞಾಸೆ ಎಂತಹ ಮಟ್ಟದ್ದೆಂದರೆ, ಕೆಲವೊಮ್ಮೆ ನಾವೂ ತಬ್ಬಿಬ್ಬಾಗ್ತೇವೆ. ಒಮ್ಮೆ ಒಬ್ಬ ಸ್ನೇಹಿತರ ಮನೆಲಿ ಟಿ.ವಿ. ನೋಡ್ತಾ ಕೂತಿದ್ದಾಗ ಮಗುವಿನ ಡೈಪರ್ ಇಲ್ಲದೇ ತೇವಗೊಂಡು ಕಿರಿ ಕಿರಿಯಾದ ಮಗು ಅಳೋದನ್ನ ತೋರಿಸಿ ಮಕ್ಕಳಲ್ಲಿ ಡೈಪರ್ ಅವಶ್ಯಕ ಎನ್ನುವುದನ್ನು ಜಾಹೀರಾತಿನ ಮೂಲಕ ತೋರಿಸುತ್ತಿದ್ದರು. ಮತ್ತೆ ಸ್ವಲ್ಪ ಸಮಯದ ನಂತರ ಒಬ್ಬ ನವ ಯುವತಿ ಡ್ಯಾನ್ಸಲ್ಲಿ ಪ್ರಥಮ ಬಹುಮಾನ ಪಡೆಯುವುದರಲ್ಲಿ ತನ್ನ ಅಶಕ್ತತೆ ಅಮ್ಮನ ಬಳಿ ತೋಡಿಕೊಳ್ಳುವುದನ್ನು ತೋರಿಸಿ ಸ್ಯಾನಿಟರಿ ನ್ಯಾಪ್ ಕಿನ್ ಬಗ್ಗೆ ಜಾಹೀರಾತು ತೋರಿಸುತ್ತಿದ್ದಾಗ... ಸುಮ್ಮನಿರದ ಮೂರು-ನಾಲ್ಕು ವರ್ಷದ ಅವರ ಹುಡುಗ ಅಮ್ಮ ನೀನು ನನಗೆ ಹೇಳಿ ಬಯ್ತೀಯಾ ..ಕತ್ತೆ ವಯಸ್ಸಾಗಿದೆ ಹಾಸಿಗೆ ಒದ್ದೆ ಮಾಡ್ತೀಯಾ ಅಂತ... ಆದ್ರೆ ಇಲ್ಲಿ ನೋಡು ಇವಳಿಗೆ ನನ್ನ ಅಕ್ಕನ ವಯಸಾಗಿದೆ ತಾನೂ ಒದ್ದೆಮಾಡ್ಕೋಳ್ಳೋದನ್ನ ಅಮ್ಮನಿಗೆ ಹೇಳ್ತಿಲ್ವಾ...??? ಎನ್ನೋದೇ..!!!!

ಸಾಮಾನ್ಯವಾಗಿ ಎಲ್ಲರ ಜೀವನದಲ್ಲಿ ಒಮ್ಮೆಯಾದರೂ ಅನುಭವಿಸಿಯೋ ಕೇಳಿಯೋ ಇರುವ ಇನ್ನೊಂದು ವಿಷಯ ಮಕ್ಕಳಿಗೆ ಸುಳ್ಳು ಹೇಳೋದನ್ನ ಕಲಿಸಿಕೊಡೋ ತಪ್ಪು ನಾವು ಮಾಡುವುದು. ಮಕ್ಕಳ ಮುಂದೆ ನೆರೆಹೊರೆಯವರ ಬಗ್ಗೆ ಅವರ ನಡೆ ನುಡಿ ಬಗ್ಗೆ ಹೇಳಿ ಆಡಿಕೊಳ್ಳೋದು. ಮಕ್ಕಳ ಮನಸಿನಲ್ಲಿ ಉಳಿದು ಬಿಡುತ್ತದೆ. ಅವರಲ್ಲೂ ಆಡಿಕೊಳ್ಳುವ ಗುಣದ ಬೀಜ ಬಿತ್ತಿದಂತೆಯೇ ಸರಿ. ಒಂದು ಮನೆಯವರು ಹೀಗೇ ಹೊಸದಾಗಿ ಬಂದಿದ್ದ ಪಕ್ಕದ ಮನೆಯ ಮಧ್ಯವಯಸ್ಕ (ಆಂಟಿ) ರ ವಾಚಾಳಿ ನಾಲಗೆ ಬಗ್ಗೆ ಆಡಿಕೊಳ್ಳುತ್ತಾ ನಗುತ್ತಿದ್ದರಂತೆ. ಸಾವಿತ್ರಮ್ಮ ಯಾವಾಗಲೂ ವಟವಟ ಅಂತಿರ್ತಾರೆ, ಅವ್ರನ್ನ ವಾಚಾಳಿ ಸಾವಿತ್ರಮ್ಮ ಅಂದರೂ ತಪ್ಪಿಲ್ಲ ಅಲ್ವಾ..?? ಅಂತ. ಅವರ ಚಿಕ್ಕ ಮಗ ಕೇಳಿಸಿಕೊಂಡು.. ಇನ್ನೊಮ್ಮೆ ಸಾವಿತ್ರಮ್ಮ ಮನೆಗೆ ಬಂದು "ಮರಿ ನಿಮ್ಮ ಅಮ್ಮ ಇದ್ದಾರಾ ..?? ನಾನು ಸಾವಿತ್ರಮ್ಮ ಬಂದಿದ್ದೀನಿ ಅಂತ ಹೇಳು" ಎಂದರಂತೆ. ಆ ಪುಟ್ಟ ಮಗು.." ಅಮ್ಮಾ ಆಂಟಿ ಬಂದಿದ್ದಾರೆ ನಿನ್ನ ಕರೀತಿದ್ದಾರೆ" ಎಂದಾಗ, "ಯಾವ ಆಂಟೀನೋ" ಎನ್ನುತ್ತಾಳೆ ಅವನ

ಅಮ್ಮ. "ಅದೇ ಕಣಮ್ಮಾ ನೀನೂ ಅಪ್ಪ ಹೇಳ್ತಿರ್ತೀರಲ್ಲಾ ಯಾವಾಗ್ಲೂ ವಟ ವಟ ಅನ್ನೋ ವಾಚಾಳಿ ಸಾವಿತ್ರಮ್ಮ ಅಂತ..ಅವ್ರು ಬಂದಿದ್ದಾರೆ" ಎನ್ನೋದೇ.

ಇನ್ನೊಬ್ರು, ತಮ್ಮನ್ನ ನೋಡೋಕೆ ಯಾರೋ ಬರುವ ಲಕ್ಷಣ ಇರುವಾಗ ತಮ್ಮ ಚಿಕ್ಕ ಮಗುವಿಗೆ..ಪುಟ್ಟಾ ಆ ಅಂಕಲ್ ಬರ್ತಿದ್ದಾರೆ..ನಾನು ಒಳಗಡೆ ಇರ್ತೇನೆ... ಅವರು ಕೇಳಿದ್ರೆ ..ಅಪ್ಪ ಮನೆಲಿಲ್ಲ ಮಾರ್ಕೆಟ್ ಗೆ ಹೋಗಿದ್ದಾರೆ ಬರೋದು ಮದ್ಯಾಹ್ನ ಆಗಬಹುದು ಅಂತ ಹೇಳಿಬಿಡು ..ಆಯ್ತಾ...?? ಅಂತ ಹೇಳಿಕೊಡ್ತಾರೆ. ಆಗಂತುಕರು ಬಂದು ಅಲ್ಲಿದ್ದ ಮಗುವಿಗೆ ಪುಟ್ಟೂ ನಿಮ್ಮ ಅಪ್ಪ ಇದ್ದಾರಾ? ಕರಿಯಪ್ಪಾ... ಕುಮಾರ್ ಅಂಕಲ್ ಬಂದಿದ್ದಾರೆ, ಅಂತ ಹೇಳು..ಎಂದಾಗ.., ಅಂಕಲ್..ಅದು..ಅದು... ಅಪ್ಪಾ ಮಾರ್ಕೆಟ್ ಗೆ ಹೋಗಿದ್ದಾರೆ ಬರೋದು ಮದ್ಯಾಹ್ನ ಆಗಬಹುದು ಅಂತ ಹೇಳಿಬಿಡು ಅಂತ ಹೇಳಿದ್ದಾರೆ. ಹೀಗೆ ಅನ್ನೋದು ಒಂದು ರೀತಿಯಾದರೆ... ಆ ಹುಡುಗನಿಗೆ ಒಂದೆರಡು ಚಾಕಲೇಟ್ ಕೊಡ್ತಾ.. ಹೌದಾ ಮರಿ ಹೋಗ್ಲಿ ಬಿಡು.. ಈ ಚಾಕ್ಲೇಟ್ ತಗೋ...ಬೇಕಾದ್ರೆ ಅಪ್ಪನ್ನ ಕೇಳು ಚಾಕ್ಲೇಟ್ ಈಸ್ಕೊಳ್ಳಾ ಅಂತ... ಅಂತ ಹೇಳೋದು... ಆ ಮುದ್ದು ಪುಟ್ಟ, ಜೋರಾಗಿ...ಅಪ್ಪಾ ಅಂಕಲ್ ಚಾಕಲೇಟ್ ಕೊಡ್ತಿದ್ದಾರೆ ಈಸ್ಕೊಳ್ಳಲಾ. ಅಂತ ಕೂಗಿ ಹೇಳಿ ಅಪ್ಪನಿಗೆ ಶಾಕ್ ಕೊಡೋದು, ಇನ್ನೊಂದು ರೀತಿ.

ಮಕ್ಕಳ ಜೊತೆ ವ್ಯವಹರಿಸುವಾಗ ನಾವು ಹುಶಾರಾಗಿದ್ದಷ್ಟೂ ಒಳಿತು. ಮಕ್ಕಳಿಗೆ ಸದಾಚಾರ ಬಾಲ್ಯದಲ್ಲೇ ಕಲಿಸಬೇಕೆಂಬುದು ಎಷ್ಟು ವಾಂಛನೀಯವ್ರೋ ಅವರಿಗೆ ಸುಳ್ಳು ಹೇಳುವುದನ್ನು ಕಲಿಸುವುದೂ ಮಹಾಪರಾಧ.

# International Comedy Festival -2011

*(Melbourne, Australia)*




Source: http://www.comedyfestival.com.au/2011/

Celebrating its 25th anniversary in 2011, The Melbourne International Comedy Festival is one of the three largest comedy festivals in the world, alongside Edinburgh Festival Fringe and Montreal's Just for Laughs Festival.

An annual event, the Melbourne International Comedy Festival literally takes over Australia's comedy capital, Melbourne, each autumn with an enormous program of stand-up comedy, cabaret, theatre, street performance, film, television, radio and visual arts.

The Festival was launched in 1987 by Barry Humphries and Peter Cook. Twenty-five festivals later, with attendances of over 500,000, it has grown to be Australia's largest cultural event - selling more tickets than any other Australian Festival. With an average ticket price of just $22, the Comedy Festival is not only a hugely popular event but an extremely accessible one. When the Melbourne Town Hall precinct is converted into a giant comedy hub, there is something for every comedy lover, from the very best local and international comedy acts in venues of all shapes and sizes.

The Melbourne International Comedy Festival aims to: discover, develop and showcase great talent for the entertainment and inspiration of a broad based audience.

Although the actual Festival only runs for three and a half weeks each year, the Comedy Festival is active on the comedy scene all year round. We're committed to bringing the art of comedy to as many punters as possible, while at the same time ensuring those who want to get into the game have every opportunity to develop their skills. Our annual Road show travels the length and breadth of the nation (and even to Singapore) bringing Festival highlights to over 80,000 eager comedy lovers. The increasingly popular open mic comedy competition, RAW Comedy, begins in January each year, with heats taking place in every state and territory as well as in regional centres. Class Clowns, our national secondary school comedy competition held throughout the year around the country is proof that it's never too early to learn the comedy craft.

Deadly Funny is our latest national initiative - a workshop and showcase program that is creating a whole new career path for indigenous comedians.

The Melbourne International Comedy Festival organisation provides the environment and promotional activities that unite and support all events. The Comedy Festival creates and manages a large number of the venues used for the Festival, presents a program of the best contemporary comedy from overseas and produces a significant number of special events for stage and screen.

The annual Melbourne International Comedy Festival is the culmination of our ongoing activities and for three and a half weeks each year makes Melbourne the centre of the comedy universe.



# ನಗು

**-ತಾರೇಂದ್ರ ಪಿ. ಶೆಟ್ಟಿಗಾರ್**

ಗಂಭೀರ ಸ್ವಭಾವದ ವ್ಯಕ್ತಿ 'ಹಾಸ್ಯ' ಸಂಚಿಕೆಗೆ ಯಾವ ಲೇಖನ ಬರೆಯುವುದೆಂದು ತಲೆಕೆರೆದುಕೊಳ್ಳುತ್ತಿದ್ದೆ. ವ್ಯತಿರಿಕ್ತ ವಿಷಯವನ್ನು ಆಯ್ದುಕೊಂಡರೆ 'ಗಾಳಿ ಗುದ್ದಿ ಮೈನೋಯಿಸಿಕೊಂಡ ಹಾಗೆ' ಆಗುವುದೋ ಎಂಬ ಸಂದೇಹ ಕೂಡ. ಕೊನೆಗೂ 'ಆಟಕ್ಕೆ ತಕ್ಕ ವೇಷ, ವೇಷಕ್ಕೆ ತಕ್ಕ ಭಾಷೆ' ಎಂಬಂತೆ ಸಂಚಿಕೆಗೆ 'ನಗು' ಎಂಬ ಪುಟ್ಟ 'ಮಗು'ವನ್ನು ಅರ್ಪಿಸುತ್ತಿರುವೆ. ಹಾಗಂತ ನಿಮ್ಮನ್ನು ನಗಿಸುವೆನೆಂದು ಭಾವಿಸಬೇಡಿ. ಮೊಗದಲ್ಲಿ ಮೂಡುವ ಮಧುರವಾದ ರಸಭಾವವನ್ನು ನನ್ನ ಅನುಭವದಲ್ಲಿ ವ್ಯಕ್ತಪಡಿಸುತ್ತಿರುವೆ.

ಹೃದಯದ ಕಡಲಲ್ಲಿ ಸಂತಸ ಉಕ್ಕಿ ಹರಿದಾಗ ಅಧರಗಳಲ್ಲಿ ಅರಳುವ ಪ್ರಸನ್ನ ಮುದ್ರೆಯನ್ನು 'ನಗು' ಎನ್ನಬಹುದು. ನಗುವವನು, ತಿಳಿದೂ ತಿಳಿದೂ ನಗಿಸುವವನು ಮನುಷ್ಯ -ಎಂದು ಪ್ರಜ್ಞಾವಂತರು ತಿಳಿಸಿದ್ದಾರೆ. ನಗುವುದು ಮನುಷ್ಯನ ಸ್ವಾಭಾವಿಕ ಗುಣ. ಪ್ರಾಣಿ ಪಕ್ಷಿಗಳು ಕೀಟಲೆ ಮಾಡುತ್ತವೆ. ಆದರೆ ಅವುಗಳಿಗೆ ನಗುವನ್ನು ವ್ಯಕ್ತಪಡಿಸಲಾಗುವುದಿಲ್ಲ. ಸುವಾಸನೆಯಿಂದಾಗಿ ಹೂವಿನ ಕಡೆ ಗಮನ ಹರಿಯುವಂತೆ, ಪ್ರಸನ್ನ ಮುದ್ರೆಯು ಎಲ್ಲರನ್ನು ತನ್ನತ್ತ ಸೆಳೆಯುವುದು. ಮಗುವಿನ ಸುಂದರ ವದನದಲ್ಲಿ ಶೋಭಿಸುವ ತುಂಟ ನಗು, ಪ್ರೇಯಸಿಯ ಒಲವಿನ ಮಂದಸ್ಮಿತ, ಹಿರಿಯರ ಅಕ್ಕರೆಯ ಮಂದಹಾಸ ಸುಖಾನಂದ ನೀಡುವುದು. ನಗುಮನವು ಚಿಂತನೆ, ಖಿನ್ನತೆ, ಘರ್ಷಣೆ, ನಿರಾಶೆಗಳನ್ನು ದೂರಸರಿಸಿ ಚೈತನ್ಯ, ಸ್ನೇಹ, ಅಪೇಕ್ಷೆ, ಆಕರ್ಷಣೆ ಹಾಗೂ ಲವಲವಿಕೆಯನ್ನು ಕುದುರಿಸುತ್ತದೆ. ಸಂಘರ್ಷ, ವ್ಯಾಕುಲತೆ, ಗೊಂದಲ ತುಂಬಿರುವ ಯಾಂತ್ರಿಕಲೋಕದಲ್ಲಿ ಆಹ್ಲಾದಕರ ನಗುವು ಮನುಷ್ಯನ ಚಂಚಲ ಮನಸ್ಸಿಗೆ, ಬುದ್ಧಿಶಕ್ತಿಗೆ ಪರಮೌಷಧವಾಗಿ ಪರಿಣಮಿಸುತ್ತದೆ.

ನಗುವಿನಲ್ಲಿ ಹಲವಾರು ರೂಪಗಳಿವೆ. ಮಂಕುಬುದ್ಧಿಯ ಬಾಲಿಶ ನಗು; ಬಲವಂತದ ಕೃತಕ ನಗು; ಪ್ರೀತಿ ತುಂಬಿದ ಪವಿತ್ರ ನಗು; ಇನ್ನೊಬ್ಬರನ್ನು ನಿಂದಿಸುವ ವ್ಯಂಗ್ಯ, ಕುಹುಕ, ಅಣಕದ ನಗು; ಸಿಡಿಲು ಬಡಿದಂತೆ ಭೋರ್ಗರೆಯುವ ಅಟ್ಟಹಾಸ; ಕಡಲ ತೆರೆಗಳಂತೆ ಉಕ್ಕಿ ಹರಿವ ನಗು; ಪನ್ನೀರು ಚಿಮುಕಿದಂತೆ ಮೃದುವಾದ ಹನಿನಗು; ಮನದಲ್ಲಿರುವ ಚಿಂತೆಯನ್ನು ನಿಯಂತ್ರಿಸಿ ತೋರಿಕೆಯ ಮುಖವಾಡದ ನಗು; ಮುಗುಳ್ನಗು; ಗಾಂಭೀರ್ಯ ನಗು ಹೀಗೆ ಹಲವು ಪ್ರಕಾರದಲ್ಲಿ ನಗಬಹುದು.

ನಮಗೆ ನಗೆ ಚೆಲ್ಲಲು ಬಹಳ ಅವಕಾಶಗಳೂ ಸಿಗುತ್ತವೆ. ವಿಹಾರಕ್ಕೆಂದು ಉದ್ಯಾನಕ್ಕೆ ಬರಲು ಒಲ್ಲೆನೆಂದ ಪತ್ನಿಗೆ 'ಸೀತೆ ರಾಮನೊಂದಿಗೆ ವನವಾಸ ಹೋಗಿದ್ದಳು' ನಿನಗೆ ನನ್ನೊಂದಿಗೆ ಉದ್ಯಾನಕ್ಕೆ ಬರಲು ಉದಾಸೀನತೆಯೇ? ಎಂದಾಗ, ಸೀತೆ ರಾಮನೊಂದಿಗೆ ವನವಾಸ ಹೋಗಿದ್ದಳು, ನಾನು ನಿಮ್ಮೊಂದಿಗೆ ಮರುಭೂಮಿಗೆ ಬಂದಿರುವೆ' ಎಂಬ ಉತ್ತರ ಥಟ್ಟನೆ ಹೊರಬಂತು. ಮುಂದುವರಿಸುತ್ತಾ ಆಗಿನ ಕಾಲದಲ್ಲಿ 'ಶ್ಯಾಪಿಂಗ್ ಸೆಂಟರ್' ಗಳಿರಲಿಲ್ಲ, ಇದ್ದಿದ್ದರೆ ಸೀತೆ ರಾಮನೊಂದಿಗೆ ವನವಾಸಕ್ಕೆ ಹೋಗುತ್ತಿರಲಿಲ್ಲ ಎನ್ನಬೇಕೇ?!! ಇಲ್ಲಿ ಹಾಸ್ಯದ ತೂಕಕ್ಕಿಂತ ಸಂದರ್ಭ ಆನಂದ ನೀಡುವುದು. ಪೌರಾಣಿಕ ನಾಟಕದ ಒಂದು ಸನ್ನಿವೇಷ. ರಾಜ ವೇಷದಾರಿ ಅಸುರನಿಗೆ 'ಬಾಯಿ ಮುಚ್ಚು ಚಂಡಾಲ, ನಿನ್ನನ್ನೀಗಲೇ ಕೊಲ್ಲುವೆ' ಎಂದು ತನ್ನ ಭರ್ಜಿಯನ್ನೆತ್ತಿ ಗರ್ಜಿಸಿದ. ಆಗ ಗುರಾಣಿಯಿಂದ ಫಕ್ಕನೆ ಒಂದು ಇಲಿ ಹಾರಿ ಮೈಮೇಲೆ ಬಿತ್ತು. ರಾಜ 'ಅಯ್ಯೊಯ್ಯೋ ಇಲಿ' ಎಂದು ಬೊಬ್ಬಿಟ್ಟ. ನಾಟಕ ವೀಕ್ಷಿಸುವವರ ಗತಿ ಹೇಗಿರಬೇಡ?. ಕೆಲವೊಂದು ಘಟನೆಗೆ ನಗಬೇಕೋ, ವಿಷಾದಿಸಬೇಕೋ ಎಂದು ತಿಳಿಯುವುದಿಲ್ಲ. ವ್ಯಕ್ತಿಯೊಬ್ಬ ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಳ್ಳಲು ರೈಲುಕಂಬಿಯಲ್ಲಿ ಮಲಗಿ ರೈಲಿಗಾಗಿ ಕಾದಿರುತ್ತಾನೆ. ಕಾದು ಕಾದು ರೈಲು ಬಾರದೆ; ಹಸಿವು, ಬಾಯಾರಿಕೆಯಿಂದ ಬಳಲಿದಾಗ, ಹೊಟ್ಟೆ ತುಂಬಿಸಿ ತೃಷೆ ನೀಗಿಸಿ ಸಾಯಲು ಮತ್ತೆ ಬರುವೆನೆಂದು ಹೊರಟು ಹೋಗುತ್ತಾನೆ.

ಉದ್ದೇಶ ಪೂರ್ವಕವಾದ ನಗು ಕೆಲವೊಮ್ಮೆ ತೊಡಕಿಗೂ ಎಡೆ ಮಾಡುವುದು. ತರುಣಿಯೊಬ್ಬಳು ನಕ್ಕಳೆಂದು ಅವಳನ್ನು ಹಿಂಬಾಲಿಸಿ ಕೈಸುಟ್ಟುಕೊಳ್ಳುವುದು, ಕಛೇರಿಯಲ್ಲಿ ನಗುವ ಚೆಲ್ಲಿ ಸಹೋದ್ಯೋಗಿಗಳಿಂದ ತಮ್ಮ ಕೆಲಸ ಮಾಡಿಸಿ ಕೊಳ್ಳುವುದು, ಧಡೂತಿಯೊಬ್ಬ ಕಾಲು ಜಾರಿ ಬಿದ್ದದನ್ನು ಕಂಡು ಘೊಳ್ಳೆಂದು ನಕ್ಕು ಅಪತ್ತನ್ನು ಅಹ್ವಾನಿಸಿಕೊಳ್ಳುವುದು, ಅಧ್ಯಾಪಕರು ಪಾಠ ಹೇಳಿಕೊಡುವಾಗ ನಕ್ಕು ತರಗತಿಯಿಂದ ಹೊರ ದಬ್ಬಿಸಿಕೊಳ್ಳುವುದು, ಅಪಾರ್ಥವುಳ್ಳ ಹಾಸ್ಯದಿಂದ ಮುಜುಗರ ಗೊಳ್ಳುವುದು ಇತ್ಯಾದಿ. ಹೀಗೆ ಒಬ್ಬರ ದೇಹಾಕೃತಿ, ಮೈಬಣ್ಣ, ದಡ್ಡತನ, ಹುಂಬತನ ಹಿಯಾಳಿಸಿ, ಅಣಕಿಸಿ, ಗೇಲಿ ಮಾಡಿ, ಒಬ್ಬರನ್ನು ಹಂಗಿಸಿ, ದು:ಖಿಸಿ ನಗುವನ್ನು ಪಡೆಯುವುದಲ್ಲ. ತುಲನಾತ್ಮಕ ಬುದ್ಧಿ, ಔಚಿತ್ಯ ಪ್ರಜ್ಞೆ ಇಲ್ಲದೇ ಹುಟ್ಟುವ ನಗುವು, ಕೀಳು ಮಟ್ಟಕ್ಕೆ ಕುಸಿಯುವುದು ಅನರ್ಥವಾಗುವುದೆಂಬುದು ಇದರ ತಾತ್ಪರ್ಯ. ನಗುವೆಂಬ ಸುಗಂಧ ಕುಸುಮ ತಾನಾಗಿ ಅರಳಬೇಕು. ಇದರ ಪ್ರಭೆ ಬೆಳದಿಂಗಳಿನಂತೆ ಎಲ್ಲೆಡೆ ಹರಡಬೇಕು.

ನಗುವೆಂಬುವುದು ಹೃದಯದ ಹುಣ್ಣುಗಳಿಗೆ ರಾಮಬಾಣ. ಮುದುಡಿದ ಮನಕ್ಕೆ ಸ್ಫೂರ್ತಿಯ ಸಿಂಚನ. ವೆಚ್ಚವಿಲ್ಲದೆ ಒಲಿಯುವ ವರದಾನ. ಹಟ, ಹಗೆ, ಕಿಚ್ಚು-ಮಚ್ಚರ ಮರೆತು ನಗುವಿನಿಂದ ಪ್ರೀತಿ-ಪ್ರೇಮ, ಅನುರಾಗ-ಅನುಕಂಪವನ್ನು ಬೆಳೆಸಲು ದಾರಿದೀಪ. ಈ ಲೇಖನದಿಂದ ನಿಮ್ಮ ಮೊಗದಲ್ಲಿ ಒಂದಿಷ್ಟು ಮುಗುಳ್ನಗೆ ತರಲು ಶಕ್ತನಾದರೆ, ನನಗದುವೇ ಸಂತೃಪ್ತಿಯ ನಗು.

ಹೊಸ ವರುಷಕ್ಕೆ ಹೊಸ ಹುರುಪಿನ, ನಗುಮೊಗದ ಸ್ವಾಗತ!
ಎಲ್ಲಿ ಒಮ್ಮೆ ನಕ್ಕು ಬಿಡಿ..

## ಸೃಜನ ಮಲ್ಲಿಗೆ

### ಕೆಣಕು - ತಿಣುಕು (ಹಾಸ್ಯ)

**-ಸುಗುಣ ಮಹೇಶ್**

-೧-

ಬಾ ಹೋಟಲಿಗೆ ಹೋಗೋಣ
ಒಂದೇ ಕಪ್ಪಿನಲಿ ಕಾಫಿ ಕುಡಿಯೋಣ...
ಕ್ಷಮಿಸು,
ನಾ ಎಂಜಲು ಕುಡಿಯೋಲ್ಲ
ಹಾಗಾದರೆ,
ನಿನ್ನದೆಂತ ಪ್ರೇಮ!!!
ನನ್ನದು ಎಂಜಲಲ್ಲದ ಪ್ರೇಮ....

-೨-

ಎಲ್ಲೆಲ್ಲಿ ನೋಡಲಿ
ನಿನ್ನನ್ನೇ ಕಾಣುವೆ
ಕಾರಣ
ಚುನಾವಣೆ ಇರುವುದಲ್ಲ
ಎಲ್ಲೆಲ್ಲೂ ನನ್ನದೇ ಭಿತ್ತಿಚಿತ್ರಗಳು..

-೩-

ಅವಳು ನನ್ನ
ಪ್ರೀತಿಲೇ ಕೊಂದಳು...
ಅದಕೆ ಕಾಣುತಿದೆ
ರೈಲು ಕಂಬಿಗಳು...

-೪-

ಮೂಗನ
ಕಾಡಿದರೇನು...
ತುಟಿಯನು
ಬಿಚ್ಚುವನೇನು..

-೫-

ರಾಜಕೀಯಕೆ ಬಂದೆ
ಜೈಲನು ಕಂಡೆ
ಕಾರಣ
ಸಿಕ್ಕಿದ್ದೆಲ್ಲಾ ತಿಂದೆ
ಮತ್ತೆ..!!
ನನ್ನ ಜೊತೆಗೆ
ಇನ್ನಾರು
ಬರುವರೋ ನಾ ಕಾಣೆ...
ಅಗೋ..!!
ನನ್ನಾಕೆಯೇ ಬಂದು
ಸೇರಿದಳು ಜೈಲಿನ ಕೋಣೆ...

## ಅನರ್ಥಗಳು ಹಾಗೇ ಸುಮ್ಮನೆ

**(ನಾವು ಬರೆದಿರುವುದು ಎಲ್ಲಾ ತಮಾಷೆಗಾಗಿ)**

**- ಸುಗುಣ ಮಹೇಶ್**

**ಜ್ಯೋತಿಷಿ :** ನಮ್ಮ ದುಡ್ಡಿಂದ ಅವರ ಜೀವನ

**ವಕೀಲ:** ಅನ್ಯಾಯದ ಸಂಕೇತ

**ಕಳ್ಳ:** ಪರರ ಸ್ವಂತಿನ ಪರಾವಲಂಬಿ

**ಟೈಲರ್:** ಬೇರೆಯವರ ಬಟ್ಟೆಗಳಿಗೆ ಕತ್ತರಿ ಹಾಕಿ ತನಗೂ ಒಂದು ಜೊತೆ ಹೊಲೆದುಕೊಳ್ಳುವವ

**ಕಣ್ಣು:** ಒಳ್ಳೇದು ಕೆಟ್ಟದ್ದು ನೋಡಿ ಆನಂದಿಸುವುದು.

**ಹೋಟೆಲ್:** ಹೆಂಡತಿ ಮುನಿಸಿಕೊಂಡಾಗ ಉಪಯೋಗ.

**ಹಾಲು:** ಪೆಪ್ಸಿ, ಕೋಕಾಕೋಲಾ ಇವರುಗಳ ಫ್ರೆಂಡ್.

**ಡಾಕ್ಟರ್ –** ಯಮ ನಗರಿಗೆ ಪಾಸ್ ಪೋರ್ಟ್ ಮತ್ತು ವೀಸಾ ವಿತರಕರು.

**ನರ್ಸ್ –** ಯಮ ನಗರಿ ಮತ್ತು ಡಾಕ್ಟರ್ ಮಧ್ಯವರ್ತಿಗಳು

**ಅಭಿಯಂತರ–** ಯಾವುದೇ ಅಭ್ಯಂತರ ಇಲ್ಲದೆ ಇರುವವನು

**ಇಂಜಿನಯರ್ –** ಇಂಜಿನ್ ಓಡಿಸೋನು..

**ಕನಸು:** ಬೆಳಿಗ್ಗೆ ಕಾಣಲಾಗದನ್ನು ರಾತ್ರಿ ನೋಡುವುದು

**ಚಂದ್ರ–ಸೂರ್ಯ:** ಇಬ್ಬರಿಗೂ ಒಬ್ಬರನ್ನೊಬ್ಬರು ಕಂಡರಾಗದು ಅದಕ್ಕೆ ಇಬ್ಬರೂ ಒಂದೊಂದು ಸಮಯಕ್ಕೆ ಬರುತ್ತಾರೆ.

**ಅತ್ತೆ–ಸೊಸೆ:** ಇವರು ಸೂರ್ಯ ಚಂದ್ರರ ಪ್ರತೀಕ

**ರೋಗ–** ಮಾಡಬಾರದಕ್ಕೆಲ್ಲಾ ದಂಡ

**ಸಾವು–** ಯಮಧರ್ಮನ ಚಾವುಟಿ

**ಜಾಣ–** ಬೇರೆಯವರನ್ನು ಹಳ್ಳಕ್ಕೆ ಬೀಳಿಸುವವ

**ಸಾಲ–** ಶೂಲದ ಸಂಕೇತ

**ಮನುಷ್ಯ–** ಅನ್ಯಾಯ ಅನರ್ಥಗಳ ಜೋಡಿ ಎತ್ತು

**ಹಾವು–** ಒಳ್ಳೆತನದ ವಿಷ ವಸ್ತು.

**ಹುಲಿ–** ನಾಡಿನತ್ತ ಕಣ್ಣಾಯಿಸದ ಹೇಡಿ

**ಇಲಿ–** ನಾಡಲ್ಲೇ ರಾಜನಂತಿರುವ ಹುಲಿ

**ಬೆಕ್ಕು–** ಕಳ್ಳರಿಗೆ ಮಾಸ್ಟರ್

**ಹಣ–** ಕಣ್ಣು ಬಾಯಿ ಬಿಡಿಸೋ ದೇವರು

**ಮಗ –** ಅಪ್ಪನ ಆಸ್ತಿಯ ಕಾವಲುಗಾರ

**ಮಗಳು –** ಪರರ ಸ್ವತ್ತು

**ಮೇಸ್ಟ್ರು–** ವಿದ್ಯೆ ಎಲ್ಲಾ ಧಾರೆಯೆರೆದು ಕೊನೆಗಾದ ದಡ್ಡಶಿಖಾಮಣಿ

**ಪೋಲೀಸ್ –** ಕಳ್ಳರ ಏಜೆಂಟ್

**ರಾಜಕಾರಣಿಗಳು –** ಭೂಹಗರಣ ಕಂಡುಹಿಡಿದ ವಿಜ್ಞಾನಿಗಳು

**ಕೋರ್ಟ್ (ನ್ಯಾಯಾಲಯ)–** ಗಾಂಧಾರಿ

## ಒಂದ್ಚುಟ್ಕ ಎರ್ಡ್ ಕವ್ನ

**–ಆಜಾದ್. ಐ.ಎಸ್.**

### ಚುಟ್ಕ

ಸಕ್ಕತ್.ಚುರುಕು..ಚುಟ್ಕ..
ಒಂದಮ್ ಎಳ್ದಂಗೆ ಗುಟ್ಕ
ಸಿಕಸ್ಟಿ ಆಕ್ಕಂಡಂಗೆ ಕಂಟ್ಮಟ್ಕ
ಏಳ್ ಬ್ಯಾಡ್ರಪ್ಪೋ ಆಮ್ಯಾಕ್ಕೆ
ಒದ್ರೆ ಬ್ಯಾಡೋ ಸುಮ್ ಬಿದ್ಕ...

### ನೀ ಕಾಣಿಸಿಬಿಟ್ಟೆ

ಕಣ್ಣಿಗೆ ಹಚ್ಚಿ ಕಾಡಿಗೆ
ಸೂರ್ಯನ ಮರೆ ಮಾಡಿಬಿಟ್ಟೆ
ಹುಬ್ಬು ಬಿಲ್ಲಿಗೆ, ಬಾಣಕೆ ಸೆಳೆವ
ಕಣ್ಣೋಟದ ಮೋಹಕ ಲೇಪ
ಎದೆಗೇ ಗುರಿಯಿಟ್ಟು ಬಿಟ್ಟೆ
ಕೆಂದಾವರೆ ತುಟಿಯಂಚಲಿ
ಹೊಳೆವ ಹಲ್ಲು, ಕಣ್ಣ ಕೋರೈಸಿಬಿಟ್ಟೆ
ಬಳಕು ಬಾಗುವ ಬಳ್ಳಿ
ನಡುವೆಲ್ಲಿಹುದೋ ಹುಡುಕಬಿಟ್ಟೆ
ಕುಡುಕನಲ್ಲ, ಮದಿರೆಯನಾನರಿಯೆ
ಮಧುಪಾನಪಾತ್ರೆ ಕೈಗೇಕೆ ಕೊಟ್ಟೆ

ವಿಷವಕೊಟ್ಟರೂ ಸರಿಯೇ
ಆ ನೀಳ್ಬೆರಳನೇಕೆ ಸೋಕಿಸಿಬಿಟ್ಟೆ
ಹೆಣ್ಣನತ್ತ ನೋಡದೀ ಕಣ್ಣಿಗೆ
ಆಗೊಮ್ಮೆ ಈಗೊಮ್ಮೆ ಕಾಣಿಸಿಬಿಟ್ಟೆ

## ಹೆಂಡ್ತಿ – ಪ್ರೇಯಸಿ

ಹೆಂಡ್ತಿ ಟೀವಿ ಇದ್ದಂಗೆ..
ಸ್ಪೇಸನ್ನು ಬತ್ತೈತೆ ಅದ್ರ ಜಸ್ಟ ಆಕ್ದಂಗೆ
ಒಂದ್ವಿಸ್ಯ ಯೋಳಾಕೆ ಸುತ್ತು ಬಳ್ಸ
ಮದ್ ಮದ್ಯೆ ಜಾಯೀರಾತು ಹಳ್ಸ
ಅತ್ ನಿಮ್ಸದ್ ಕತೆ ..ಎಳಿತಾನೇ ಇರ್ತಾರೆ
ಅತ್ ವರ್ಸ ಆದ್ರೂ ಮುಗಿಯೊಲ್ಲ ಅಂತಾರೆ

ಆದ್ರೆ ,..ಅವ್ಳು ಪ್ರೇಯ್ಸಿ.. ಬಿಡಿ ಕೇಳ್ ಬ್ಯಾಡಿ!
ಎಂಗಿದ್ರೂ ಏನಂದ್ರೂ ಮಾಡ್ತಾಳೆ ಮೋಡಿ
ಮುಂಚೆ ದುಡ್ಡಿರೋರ್ಗೆ ಸಿಗ್ತಿತ್ತು ಆ ಗತ್ತು
ಈವಾಗ ಎಲ್ಲಾರ್ಗೂ ಮೊಬೈಲ್ ದೇ ಮತ್ತು
ಅವ್ಳೂ ಅಂಗೆಯಾ ಮೊಬೈಲ್ ಇದ್ದಂಗೆ
ನೋಕಿಯಾ, ಎಲ್ಜಿ, ಸಾಮ್ಸಂಗ್ ಎಚ್ ಟಿ ಸಿ ಓಗಿ
ಬೆಳ್ಳಾಗೇ ಆಡ್ಸೋ ಐ ಫೋನ್ ಬಂದಂಗೆ

## ಇದು ಎಂಥಾ ಕಾಲವಯ್ಯ...!

- ಶೈಲಜ ಹೊಂಬಾಳಿ

ಇದು ಎಂಥಾ ಕಾಲವಯ್ಯ...!
Netಲ್ಲೇ ಹುಡುಗ ಹುಡುಗಿ ಫೇಸ್ ನೋಡಿ,
ಕುಂತ್ಕಂತಲ್ಲೇ E-mail, chat ಮಾಡಿ,
inter ಬಲೆಯಲ್ಲೇ globe ಸುತ್ತಿ ಬಳಸಿ,
ಸಂಸಾರ divorce ಮಾಡ್ತಾರಲ್ಲ...!
ಪಾರ್ಕ್ ಸಿನೆಮಾ ಮನೆ ಮಠ ಬೇಕಾಗೇಯಿಲ್ಲ..!

ದೇವರ ದರ್ಶನಕಂತ templeಗೆ ಹೋದ್ರೆ,
ಜಾಗಟೆ ಘಂಟೆ ಮಂತ್ರದ CD ಹಾಕಿ ಮಂಗಳಾರತಿ
ತೀರ್ಥ ಕೊಡೊಕೂ machine ಬಂತಲ್ಲಾ,
special ದರ್ಶನವೆಲ್ಲಾ VIPಗೆ ಮೀಸಲಂತಲ್ಲಾ..!
ದೇವರೇ ದಂಗು ಬಡಿದು ಕಲ್ಲಾಗಿ ಕುಳಿತನಲ್ಲಾ.!

Girls ಎಲ್ಲಾ Style style ಅಂತ
ತುಂಡು ಚಿಂದಿ ಪ್ಯಾಂಟ್ ಶರ್ಟ್ ಹಾಕಿ
ಅದನೇ ಶೋಕಿ ಚಮಕ್ ಅಂತಾರಲ್ಲ..!
shy, ಲಜ್ಜೆ ಎಲ್ಲಾ ಬಿಟ್ಟು ಕಂglishನಲ್ಲೇ,
ಈ ಶತಮಾನದ model ಹೆಣ್ಣು ಅಂತಾರಲ್ಲಾ..!

ದುಡ್ಡು ದುಡ್ಡು ಎಂದು ದುಡ್ಡನ್ನೇ ತಿಂದು,
diet, drugs ಅಂತ ಸಣ್ಣಾಗಾಗ್ತರಲ್ಲ.!
ತುತ್ತು ತುತ್ತು ಎಂದು ಒಪ್ಪತ್ತಿನ ಗಂಜಿಗೂ
ಗತಿಯಿಲ್ಲದೆ ಸಣಕಲಾಗಿ ಜನ ಸಾಯ್ತರಲ್ಲ.!
ಇವರಿಗೆ diet, drugs ಬೇಕಾಗೇಯಿಲ್ಲ..!

ಕಾಗೆ ಹೊಟ್ಟೆಯಲ್ಲಿ ಕೋಗಿಲೆ ಹುಟ್ಟಿ...,
ಕೋಗಿಲೆ ಹೊಟ್ಟೆಯಲ್ಲಿ ಕಾಗೆ ಹುಟ್ಟಿ...!
ಮಾಸ, ಋತುಗಳೇ change ಆಗಿವೆಯೆಲ್ಲಾ.!
ಕಣ್ಣಿದ್ದರೂ ಕುರುಡಾಗಿಹರೆಲ್ಲಾ..!
ನೇಮ ನಿಯಮಗಳೆ ಎಲ್ಲಾ ಮಾಯವಾಗಿ,
ಕಾಲಿಲ್ಲದೆ ಕಾಲ ಉರುಳುತ್ತಿದೆಯಲ್ಲ...!
ಇದು ಎಂಥಾ ಕಾಲವಯ್ಯ...!

## ನಗೆ ಪಟಾಕಿಗಳು

-ಶೈಲಜ ಹೊಂಬಾಳಿ

ನಾ ನಿನ್ನ ಕನಸಿನ ಮನಸಿನ
ಬಂಗಾರ.., ಚಿನ್ನ...!
ನನ್ನ ಮೈ ಮನವೆಲ್ಲಾ ನೀತೊಡಿಸಿದ..
ಚಿನ್ನ... ಬಂಗಾರ..!

ಪ್ರತ್ಯಕ್ಷ ಪತಿದೇವರೇ.. ನೀ ಎದುರಿಗಿರುವಾಗ..!,
ನಿನ್ನ ಹುಂಡಿಯೇ ನನ್ನ ಕೈಲಿರುವಾಗ...!
ಕಾಣದ ದೇವರಿಗೆ ಕೈ ಮುಗಿದು
ಕಾಡುವುದೇಕೆ..,ಬೇಡುವುದೇಕೆ...!?

ನೀ.. ಅವಳ ನೋಡುತ ಹೊರಟರೆ...!?
ನಾ.. ನಿಮ್ಮ ಕಾಲಿಗೆ ತೊಡರಿ ಬಿದ್ದೀರಿ..,
ಕಾಲು ಮುರಿದೀತು..ಜೋಕೆ..!
ಅಂದು ನೀ.. ಕೈ ಕೊಟ್ಟು...,
ಕುಂತೆ ನಾ.. ತಲೆಗೆ ಕೈ ಕೊಟ್ಟು,
ನಿನ್ನರಿಯದೆ ದಿಕ್ಕೆಟ್ಟು....!

*ಅನುಭವ ಮಲ್ಲಿಗೆ*

## ಅನುವಾದ ಅವಾಂತರ

–ಡಾ. ರಾಜಮೂರ್ತಿ

ನಾನು ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯ.

೧೯೬೬–೧೯೭೦ರ ಈ ಅವಧಿಯಲ್ಲಿ ನಾನು ಅನುಭವಿಸಿದ ಭಾಷಾ ಅವಾಂತರಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಇದು ನಮ್ಮ ಮಾಸ್ತರರ ತಪ್ಪಲ್ಲ. ಪಾಪ, ಕಾಲೇಜು ಸೇರುವ ಮುನ್ನ, ಆಂಗ್ಲ ಭಾಷೆಯ ಸಹವಾಸವಿಲ್ಲದೆ, ನಂತರ ಮಾತನಾಡಲು ಹೊರಟ ಇವರಿಗೆ, ಕನ್ನಡದಲ್ಲಿ ಯೋಚಿಸಿ ಆಂಗ್ಲ ಭಾಷೆಯಲ್ಲಿ ಹೇಳುವ ಅಭ್ಯಾಸ.

ನನ್ನ ಮೊದಲ ಅನುಭವ ಡ್ರಾಯಿಂಗ್ ಮಾಸ್ತರದು.
ಇವರ ಕ್ಲಾಸ್ನಲ್ಲಿ ವಿದ್ಯಾರ್ಥಿಗಳು ಡ್ರಾಯಿಂಗ್ ಹಾಳೆಗಳನ್ನು ತರಲು ಹೊರಟು ನಿಧಾನವಾಗಿ ಬರುತ್ತಿದ್ದರು.
ಇದನ್ನು ಸಹಿಸದ ನಮ್ಮ ಮಾಸ್ತರ ಉವಾಚ
Commer commE comes, goer goE goes, whos father



what goes?!
(ಬಂದವರು ಬರುತ್ತಲೇ ಇದ್ದಾರೆ. ಹೋಗುವವರು ಹೋಗುತ್ತಲೇ ಇದ್ದಾರೆ. ಯಾರಪ್ಪನ ಗಂಟು ಹೋಗಬೇಕು)
ಇವರು ವಿಧ್ಯಾರ್ಥಿಯೊಂದಿಗೆ ಮಾತನಾಡುವಾಗ ಬೇರೆ ಯಾರಾದರೂ ಮಾತಾಡಿದರೆ –
I talk he talks why center center talk?

ಇನ್ನು ನಮ್ಮ ಸಿವಿಲ್ ಇಂಜಿನಿಯರಿಂಗ್ ವಿಭಾಗ ಮಾಸ್ತರು. ಎನ್.ಸಿ.ಸಿ ಯ ಅಧಿಕಾರಿಯಾಗಿದ್ದ ಇವರ ವೈಖರಿ ಮತ್ತೂ ವಿಶೇಷ.
ಕಾಲೇಜಿನ ಪ್ರಾಂಗಣದಲ್ಲಿ ಸುತ್ತುತ್ತಿದ್ದ ವಿಧ್ಯಾರ್ಥಿಯನ್ನು ವಿಚಾರಿಸಿದ ಪರಿ.
I say u fool why u r rotating in the corridor

ಮತ್ತೊಮ್ಮೆ ನಾವು ಎನ್.ಸಿ.ಸಿ ಶಿಬಿರದಲ್ಲಿ ಇದ್ದಾಗ, ಮರವೊಂದರ ರೆಂಬೆಯ ಮೇಲೆ ಕುಳಿತು, ರೇಡಿಯೋ ಆಲಿಸುತ್ತಿದ್ದ ಗೆಳೆಯನಿಗೆ
– idiot r u in the camp? Why r u climbing the tree and asking the radio?

ಈ ಮಾಸ್ತರರ ಸರ್ವ ಶ್ರೇಷ್ಠ ಉವಾಚ, ನಮ್ಮ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ನಡೆದದ್ದು.

ಬಹಳ ರಶ್ ಇದ್ದ ಕಾರಣ, ರಂಗ ಮಂಚದ ಬಳಿ ಪ್ರಾಧ್ಯಾಪಕರಿಗೆ ಮೀಸಲಾಗಿದ್ದ ಸ್ಥಳದಲ್ಲಿ ಕೂರಲು ಹೊರಟ ವಿಧ್ಯಾರ್ಥಿ ಇವರನ್ನು ಅನುಮತಿ ಕೇಳಲು, ಅವರಿತ್ತ ಉತ್ತರ

When so many big people are standing what is my arithmetic? ಎನ್ನೋದೇ...!!??

## ಬೀchiಯವರ ಹಾಸ್ಯ ಪರಿಚಯ :

**ಸಂಗ್ರಹ -ರೇವಣಸಿದ್ದಪ್ಪ ಹೊಂಬಾಳಿ**

ಬೀchi ಯವರು ನಮ್ಮಿಂದ ಕಣ್ಮರೆಯಾಗಿ ೩೦ ವರ್ಷಗಳೇ ಸಂದಿದ್ದರೂ ತಮ್ಮ ಹಾಸ್ಯ ಸಾಹಿತ್ಯ, ನಗೆ ಚಟಾಕಿಗಳ ಮೂಲಕ ಇಂದಿಗೂ ನಮ್ಮ ಮಧ್ಯೆ ನೆಲೆಸಿದ್ದಾರೆ. ಹಾಸ್ಯ ಸಾಹಿತ್ಯಕ್ಕೆ ಒಂದು ಘನತೆ, ಗೌರವವನ್ನು ತಂದುಕೊಟ್ಟವರು ಬೀchi ಯವರು. ಬೀchi ಎಂದರೆ ತಿಂಮ, ತಿಂಮ ಎಂದರೆ ಬೀchi. ತಿಂಮನ ಪ್ರಸಂಗಗಳನ್ನು ಓದಿ ನಗದಿದ್ದವರೇ ಇಲ್ಲ. ಬೀchi ಯವರ ಅನೇಕ ನಗೆ ಪ್ರಸಂಗಗಳು ಎಲ್ಲಿಯೂ ದಾಖಲಾಗದೆ ಮರವೆಗೆ ಸರಿದಿದ್ದವು. ಆದರೆ ಶ್ರೀ ಕೇಶವರಾಯರು ಅನೇಕ ಹೃದಯಸ್ಪರ್ಶಿ ಹಾಸ್ಯ ಪ್ರಸಂಗಗಳನ್ನು ಸಂಗ್ರಹಿಸಿ, ಬೀchi ಯವರ ಒಂದು ಚಿತ್ರಣ ಸಿಗುವಂತೆ ಪುಸ್ತಕದ ಮೂಲಕ ಪರಿಚಯಿಸಿದ್ದಾರೆ.

ಬೀchi ಯವರ ಪೂರ್ಣ ಹೆಸರು ಭೀಮಸೇನ ರಾಯಸಂ. ಇವರು ಈಗಿನ ದಾವಣಗೆರೆ ಜಿಲ್ಲೆಯ ಹರಪನಹಳ್ಳಿಯಲ್ಲಿ ೨೩ನೇ ತಾರೀಖು ೧೯೧೩ನೇ ಇಸವಿಯಲ್ಲಿ ಹುಟ್ಟಿದರು. ಇವರ ತಂದೆಯ ಹೆಸರು ಶ್ರೀನಿವಾಸರಾವ್ ಹಾಗೂ ತಾಯಿ ಭಾರತಮ್ಮ. ಬೀಚಿಯವರು ಪೋಲಿಸ್ ಇಲಾಖೆಯಲ್ಲಿ ಕ್ಯಾಂಪ್ ಕ್ಲಾರ್ಕ ಆಗಿ ಕೆಲಸದಲ್ಲಿದ್ದರು. ಇವರ ಪತ್ನಿ ಹೆಸರು ಸೀತಾಬಾಯಿ. ತಮ್ಮ ಮೂವತ್ತೇಳನೆಯ ವಯಸ್ಸಿನವರೆಗೆ ಬೀಚಿಯವರು ಕನ್ನಡದಲ್ಲಿ ಬರೆಯುವುದಿರಲಿ, ಕನ್ನಡ ಪುಸ್ತಕವನ್ನು ಓದುವುದೂ ಅವಮಾನ ಎಂದು ಭಾವಿಸಿದ್ದರಂತೆ. ಬೀಚಿಯವರು ಮೊಟ್ಟಮೊದಲು ಓದಿ, ಪ್ರಭಾವಿತರಾದ ಪುಸ್ತಕ ಅ.ನ.ಕೃಷ್ಣರಾಯರು ಬರೆದ ಕಾದಂಬರಿ ಸಂಧ್ಯಾರಾಗ. ಹೀಗಾಗಿ ಆಯುಷ್ಯದುದ್ದಕ್ಕೂ ಆಂಗ್ಲ ಭಾಷಾ ಪ್ರೇಮಿಯಾಗಿದ್ದರೂ ಅವರು ಬರೆದಿದ್ದೆಲ್ಲಾ ಕಸ್ತೂರಿ ಕನ್ನಡದಲ್ಲಿ ಮಾತ್ರ. ಮಾತೃಭಾಷೆಯಾದ ಕನ್ನಡಕ್ಕೇ ಮೊದಲ ಸ್ಥಾನವನ್ನಿತ್ತು ಎರಡನೆಯ ಸ್ಥಾನವನ್ನು ಇಂಗ್ಲೀಷಿಗೆ ಇತ್ತವರು ಇವರು. ಅದಕ್ಕಾಗಿಯೇ ಇವರ ಹೆಸರು "ಬೀchi" ಎಂದು ಬರೆಯುವುದು.

ವಿಚಿತ್ರ ತೆರನಾದ ವಿಭಿನ್ನ ಶೈಲಿಯ ಹಾಸ್ಯವನ್ನು ನಮ್ಮಲ್ಲಿ ಸೃಷ್ಟಿಸಿದವರು ಒಬ್ಬರು ಟಿ.ಪಿ.ಕೈಲಾಸಂ ಹಾಗೂ ಇನ್ನೊಬ್ಬರು ಬೀchi ಯವರು. ವಿನೋದ ಸಾಹಿತ್ಯ ಪ್ರಾಕಾರಕ್ಕೆ ಒಂದು ಹೊಸ ಆಯಾಮವನ್ನೇ ಇತ್ತಿರುವ ಬೀchi ಯವರ **ಹಾಸ್ಯಪ್ರಜ್ಞೆ,** ಸರಳ ಸ್ವಭಾವ ಹಾಗೂ ನಿರ್ಲಿಪ್ತ ಮನೋಭಾವನೆಯನ್ನು ಹೊಂದಿದ್ದರು. ಅವರು ಸೃಷ್ಟಿಸಿರುವ ತಿಂಮನ ಪಾತ್ರ ತಮ್ಮನ್ನೇ ಆದ್ಯಂತವಾಗಿ ಪ್ರತಿಬಿಂಬಿಸುವ ಪಾತ್ರ. ತಾವು ಹೇಳಬೇಕೆಂದಿದ್ದ ಅನೇಕ ಸೂಕ್ಷ್ಮ ವಿಷಯಗಳನ್ನು ತಿಂಮನ ಮೂಲಕ ಹೇಳಿಸಿರುವುದು ಬೀchi ಯವರ ಒಂದು ವೈಶಿಷ್ಟ್ಯ. ಹಾಸ್ಯದ ಮಾತುಗಳಿಂದ ಜನ ಸಮುದಾಯವನ್ನು ನಗಿಸುವುದಷ್ಟೇ ಬೀchi ಯವರ ಉದ್ದೇಶವಾಗಿರಲಿಲ್ಲ. ನಗಿಸುವುದರೊಂದಿಗೆ ಸಮಾಜಕ್ಕೆ ಸೂಕ್ತ ಸಂದೇಶವನ್ನೂ ಕೊಡುವ, ತನ್ಮೂಲಕ ಸಮಾಜವನ್ನು ಎಚ್ಚರಿಸುವ ಕಾಳಜಿ ಅವರಲ್ಲಿತ್ತು. ಬೀchi ಯವರ ಕೆಲವು ಬಿಚ್ಚು ಮನಸಿನ ಅನಿಸಿಕೆಯ ವಿಷಯಗಳನ್ನು ಶ್ರೀ ಕೇಶವರಾಯರು ಬರೆದ ಪುಸ್ತಕ (ಬೀchi ಬುಲೆಟ್ಸು-ಬಾಂಬ್ಸು-ಭಗವದ್ಗೀತೆ) ದಿಂದ ಆಯ್ದುಕೊಂಡು ನಿಮ್ಮಗಳ ಮುಂದೆ ಇಡುವ ಪ್ರಯತ್ನ ಇದು.

೧. "ಹಾಲು...?" (ಹಾಲು ಎಂಬುದರ ಬಗ್ಗೆ ಕೈಲಾಸಂ ರಚಿಸಿರುವ ಈ ಗೀತೆಗೆ ಕಡೆಯ ಎರಡು ಸಾಲುಗಳನ್ನು ಸೇರಿಸಿದವರು ಬೀchi)
ಹುಟ್ಟಿದ್ಮಕ್ಳು ಹುಲ್ಸಾಗ್ಬೆಳ್ಯೋಕೆ --- ತಾಯಿ ಹಾಲು
ಬುದ್ದಿ ಚುರುಕಾಗ್ಲೆಂತ ಬಳಸ್ಬೇಕು --- ಹಸು ಹಾಲು
ಬಾಡಿ ಬಲ್ಸೋಕೆ ಕುಡ್ಯೋದೊಳ್ಳೇದು --- ಎಮ್ಮೆ ಹಾಲು
ಕಜ್ಜಿ ಕುರು ಆದ್ರೆ ಹಚ್ಬೇಕು --- ಕಳ್ಳಿ ಹಾಲು
ಗಾಂಧಿಯಂಥ ಸರಳ ಜೀವಿಗಳಿಗ್ನಾಕು --- ಮೇಕೆ ಹಾಲು
ಇದ್ಯಾವ್ದೂ ಬೇಡ್ವೇ ಬೇಡಾಂತ ಅನ್ನೋರಿಗೆ --- ಆಲ್ಕೋ ಹಾಲು
ಇದೆಲ್ಲಾ ಏನೇ ಇದ್ರೂ ನಮ್ಮ ರಾಜಕಾರಣಿಗಳಿಗೆ ಸಾಯೋವರೆಗೂ ಬೇಕೇ ಬೇಕು --- ಅಸೆಂಬ್ಲಿ ಹಾಲು

೨. "ದೇವ ಭಾಷೆ" : ಸಂಸ್ಕೃತ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಉತ್ತರಿಸಲಾಗದೆ ಗಂಟೆಗಟ್ಟಲೆ ತೊಳಲಾಡಿದ ತಿಂಮ. ವೇಳೆ ಮುಗಿಯುತ್ತಾ ಬಂದಿತು, ಒಂದಕ್ಷರವನ್ನೂ ಬರಿದಿರಲ್ಲಿಲ್ಲ. ಬಿಳಿ ಕಾಗದವನ್ನು ಹೇಗೆ ಕೊಡುವುದು? ಕಡೆಗಿಷ್ಟು ಬರೆದು ಕೊಟ್ಟ. "ಸಂಸ್ಕೃತ ಭಾಷೆ ನಿಜವಾಗಿಯೂ ದೇವಭಾಷೆ. ಮಾನವರಿಗೆ ಇದು ಬಾರದು. ಇದು ಸತ್ತ ಭಾಷೆ ಎಂಬುದೂ ಸುಳ್ಳಲ್ಲ. ಯಾವ ಪುಣ್ಯಾತ್ಮ ಇದನ್ನು ಕೊಂದನೋ ನಾನರಿಯೆ - ಆದರೆ ಈಗ ಮಾತ್ರ ಇದು ನನ್ನನ್ನು ಕೊಲ್ಲುತ್ತಿದೆ."

೩. "ಕಡೇ ಪರೀಕ್ಷೆ" : ತಿಂಮನ ಅಜ್ಜ ತಮ್ಮ ಕೋಣೆಯಿಂದ ಈಚೆಗೆ ಬರುತ್ತಿರಲ್ಲಿಲ್ಲ. ಅವರಾಯಿತು. ಅವರ ಗ್ರಂಥಾವಲೋಕನವಾಯಿತ. ತಿಂಮನ ತಮ್ಮ ಆಶ್ಚರ್ಯದಿಂದ ಅಣ್ಣನನ್ನು ಕೇಳಿದ. "ಅದೇನು ಅಜ್ಜ ಅಷ್ಟು ಓದುತ್ತಿದ್ದಾರೆ? ಅವರಿಗೂ ಪರೀಕ್ಷೆ ಇದೆಯೇ?" ತಿಂಮ ತಮ್ಮನಿಗೆ

ಸಮಾಧಾನ ಹೇಳಿದ: "ಅಹುದು. ಭಗವದ್ಗೀತೆ ಬಾಯಿಪಾಠ ಮಾಡುತ್ತಿದ್ದಾರೆ - ಕಡೇ ಪರೀಕ್ಷೆ ಬರುತ್ತಿದೆಯಲ್ಲಾ ಅವರಿಗೆ?"

೪. "<u>ಸ್ವಾರ್ಥ ಸಲ್ಲದು</u>" : ಯಾವ ಕಾರಣಕ್ಕೂ ಸ್ವಾರ್ಥ ಸಲ್ಲದು ಎಂಬುದರ ಬಗ್ಗೆ ಬೀchi ಯವರ ಎಚ್ಚರಿಕೆಯ ಮಾತುಗಳು ಹೀಗಿವೆ.

"ಅಗಳು ಕಂಡರೆ ಕಾಗೆ ಬಳಗವನು ಕರೆವುದು! ಕಾಗೆ ಗುರು ನಿನಗೆ, ಗೂಬೆ ಆಗದಿರು||

ಬಾಗಿಲ ಮುಂದೂಡಿ ಬಿಸ್ಕೀಟು ತಿನ್ನುವ ಮನುಜಾ| ಕಾಗೆಗೆ ಕೈಮುಗಿ, ಏಳು ತಿಂಮ||"

೫. "<u>ಆತ್ಮ</u>": ಮಾನವನ ಆತ್ಮದ ಕುರಿತು ಬೀchi ಯವರು ಹೀಗೆ ನುಡಿದಿದ್ದಾರೆ:

ಧನವ ದೊಡ್ಡದು ಮಾಡು, ಮಮಕಾರ ಬೆಳೆದೀತು| ಮನೆಯ ದೊಡ್ಡದು ಮಾಡು ಬಳಗ ಬೆಳೆದೀತು||

ಮನಸು ದೊಡ್ಡದು ಮಾಡು ಆತ್ಮ ಬೆಳೆದೀತು| ನಿನಗಾವುದು ಹಿತವೋ ಅದು ಬೆಳಸು ತಿಂಮ||

ಯಾರಾರೋ ಏನೇನೋ ಎಷ್ಟೆಷ್ಟು ಮಾಡಿಹರು| ಅರಿಯೆ ನೀನವರ ಅಂತರಂಗವನು||

ಬರಿ ಜಂಬ ಎಲ್ಲವು ಸ್ವಯಂ ಪ್ರತಿಷ್ಠೆ| ತೆರೆದು ಕೇಳಾತ್ಮವನು ತೃಪ್ತಿ ಆಯಿತೆ? ತಿಂಮ||

ಸರಿಯಲ್ಲ ಈ ಜಗವು ಮತಿಯಿಲ್ಲ ಈ ಜಗಕೆ| ಹಿರಿದು ಆಗಲು ಬೇಕು ನಮ್ಮ ಬಾಳು||

ಕಿರಿಕಿರಿ ದುಸುಮುಸು ವ್ಯರ್ಥವಾದುದೆ ಇಲ್ಲ| ಸಿರಿವಂತ ಆತ್ಮದ ಗೂಣಗಾಟವಿದು ತಿಂಮ||

೬. <u>ವಿಚಿತ್ರ</u>: ಇನ್ನೊಂದು ಬೀchi ಯವರ ಹಾಸ್ಯ ಪರಿಚಯ ಹೀಗಿದೆ: **ವಿಜ್ಞಾನ** ಪಂಡಿತರು ಸುದೀರ್ಘವಾಗಿ ಪಾಠವನ್ನು ಹೇಳಿ ಮುಗಿಸಿದರು. ವಿದ್ಯಾರ್ಥಿಗಳನ್ನು ಪರೀಕ್ಷಿಸಲು ಕಡೆಗೊಂದು ಪ್ರಶ್ನೆ ಕೇಳಿದರು. "**ವೈಜ್ಞಾನಿಕವಾಗಿ** ನಮ್ಮಲ್ಲಿ ಆಗಿರುವ ಪ್ರಗತಿಗಳನ್ನು ಸೂಚಿಸಲು ನೂರು ವರ್ಷಗಳ ಹಿಂದೆ ಇಲ್ಲದ, ಆದರೆ ಇಂದು ಇರುವ ಒಂದು ವಿಚಿತ್ರವೇನು ಹೇಳುತ್ತೀರಾ?" "ಸೂರ್ಯ " ಎಂದ ಒಬ್ಬ ಬೃಹಸ್ಪತಿ. ಯಾರೂ ಸರಿಯಾದ ಉತ್ತರ ಕೊಡಲಿಲ್ಲ. "ನಾನು ಹೇಳುತ್ತೇನೆ ಸಾರ್" ಎಂದು ಎದ್ದು ನಿಂತ ತಿಂಮ. " ಹೇಳಯ್ಯ, ನೂರು ವರ್ಷಗಳ ಹಿಂದೆ ಇಲ್ಲದ, ಆದರೆ ಇಂದು ಇರುವ ಒಂದು ವಿಚಿತ್ರವೇನು?" ಅದಕ್ಕೆ "ತಾವು ಸಾರ್" ಎಂದ ತಿಂಮ.

**<u>ಹಾಸ್ಯ ಚಟಾಕಿಗಳು</u>**

ಪ್ರಶ್ನೆ: ನೆನಪಿನ ಶಕ್ತಿ ಬರಬೇಕಾದರೆ ಏನು ಮಾಡಬೇಕು ಅಣ್ಣಯ್ಯ?

ಉತ್ತರ: ಏನೂ ಮಾಡಬೇಕಾಗಿಲ್ಲ. ಮರೆಯುವದನ್ನು ಮರೆಯಬೇಕು. ಅಷ್ಟು ಮಾಡಿದರೆ ಸಾಕೇ ಸಾಕು.

ಪ್ರಶ್ನೆ: ಮಾನವ ಅತ್ಯಂತ ಆಪತ್ತಿನಲ್ಲಿರುವಾಗ ಯಾರ ದಾಸನಾಗುತ್ತಾನೆ ಸಾರ್?

ಉತ್ತರ: ಸಂಕಟ ಬಂದಾಗ ವೆಂಕಟರಮಣ. ದೇವರು ಹುಟ್ಟಿದುದೇ ಹಾಗೆ.

ಪ್ರಶ್ನೆ: ವಿಧಿಯ ಕಾಟದಿಂದ ಶಿವನು ಚರ್ಮವನ್ನು ಹೊದಿಯ ಬೇಕಾಯಿತು, ಕೃಷ್ಣನು ದನವನ್ನು ಕಾಯ ಬೇಕಾಯಿತು. ನಿಮಗೆ ಏನಾಯಿತು ಸ್ವಾಮಿ?

ಉತ್ತರ: ನಿಮ್ಮ ಪ್ರಶ್ನೆಗೆ ಉತ್ತರ ಹೇಳಬೇಕಾಯಿತು.

ಪ್ರಶ್ನೆ: ಕಲಿತ ಸೊಸೆ ಸಂಸಾರವನ್ನು ಸರಿಯಾಗಿ ತೂಗಿಸಿ ಕೊಂಡು ಹೋಗಲಾರಳು, ಎಂದೆನ್ನುವ ಜನರಿಗೆ ಏನನ್ನಬೇಕು?

ಉತ್ತರ: ಆ ಜನ ಅನ್ನುವುದೇ ಸರಿ. ತೂಗಿಸಿಕೊಂಡು ಹೋಗಲಾರಳು. ತೂಗಿಸಿಕೊಂಡು ಇರುತ್ತಾಳೆ.

ಪ್ರಶ್ನೆ: ಎಂಜಿನಿಯರ್ ಮತ್ತು ಡಾಕ್ಟರ್, ಇವರಿಬ್ಬರಲ್ಲಿ, ಮೊದಲು ಯಾರು ನರಕಕ್ಕೆ ಹೋಗುತ್ತಾರೆ ರಾಯರೆ?

ಉತ್ತರ: ಇಬ್ಬರೂ ಹೋಗುವುದಿಲ್ಲ. ಒಬ್ಬರು ನರಕವನ್ನು ಕಟ್ಟುತ್ತಾರೆ. ಇನ್ನೊಬ್ಬರು ಅಲ್ಲಿಗೆ ಗಿರಾಕಿಗಳನ್ನು ಕಳಿಸುತ್ತಾರೆ.

ಪ್ರಶ್ನೆ: ಮನುಷ್ಯನು ದೇವರ ಸನ್ನಿಧಿ ಸೇರಲು ಭಕ್ತಿ ಬೇಕೋ ಅಥವಾ ಜ್ಞಾನ ಬೇಕೋ?

ಉತ್ತರ: ಇವೆರಡಕ್ಕಿಂತ ಸುಲಭ ಮಾರ್ಗ ಇನ್ನೊಂದಿದೆ. ಒಬ್ಬ ಸಾಧಾರಣ ಡಾಕ್ಟರೇ ಸಾಕೇ ಸಾಕು.

ಪ್ರಶ್ನೆ: ನಿಮ್ಮ ದೇವರು ಮಿಸ್ಟರೋ, ಮಿಸಸ್ಸೋ, ಮಿಸ್ಸೋ?

ಉತ್ತರ: ನನ್ನ ದೇವರು ಮಿಸ್ಟರೂ ಅಲ್ಲ, ಮಿಸಸ್ಸೂ ಅಲ್ಲ, ಮಿಸ್ಸೂ ಅಲ್ಲ - ಅರ್ಥವಾಗುವ ತನಕ ಮಿಸ್ಟರೀ!

ಪ್ರಶ್ನೆ: ಭಕ್ತಿಗಾಗಿ ದೇವರೋ, ಅಥವಾ ದೇವರಿಗಾಗಿ ಭಕ್ತಿಯೋ?

ಉತ್ತರ: ಎರಡೂ ಅಲ್ಲ. ನಮ್ಮ ಅನುಕೂಲಕ್ಕಾಗಿ ಒಬ್ಬ ದೇವರು ಮತ್ತು ಅವನ ಭಕ್ತಿ.

ಪ್ರಶ್ನೆ: ಈಗಿನ ಸಮಾಜದಲ್ಲಿ ಪ್ರಾಮಾಣಿಕತೆಗೆ ಗೌರವವೇ ಇಲ್ಲವಲ್ಲಾ ಸ್ವಾಮಿ?

ಉತ್ತರ: ಗೌರವದ ಆಸೆಗಾಗಿ ಪ್ರಾಮಾಣಿಕತೆಯೇ? ಅವರಿವರ ಹೊಗಳಿಕೆಗಾಗಿ ಪಾತೀವ್ರತ್ಯವೇ? ಹೊಗಳುವವರು ಇಲ್ಲೆಂದು ಪಾತೀವ್ರತ್ಯ ಬಿಡಲಾದೀತೆ.

ಪ್ರಶ್ನೆ: ಹೆಣ್ಣು ಗೃಹಲಕ್ಷ್ಮಿಯಾದರೆ ಗಂಡು ಏನು?

ಉತ್ತರ: ಅಷ್ಟೂ ತಿಳಿಯುವುದಿಲ್ಲವೆ? ನಡು ಬೀದಿ ನಾರಾಯಣ.

ಪ್ರಶ್ನೆ: ಹೆಚ್ಚಾಗಿ ಸುಳ್ಳು ಹೇಳುವವರು ಗಂಡಸರೋ ಅಥವಾ ಹೆಂಗಸರೋ?

ಉತ್ತರ: ಗಂಡಸರು ಎಂದು ಎಲ್ಲರೂ ಒಪ್ಪಲೇಬೇಕು. ಆದರೆ ಅದಕ್ಕೆ ಕಾರಣ ಹೆಂಗಸರು.

ಪ್ರಶ್ನೆ: ದೇವರ ಮೂರ್ತಿಯನ್ನು ಮಾಡಿಕೊಂಡು ಪೂಜಿಸುವುದಕ್ಕಿಂತಲೂ ದೇವರ ಚಿತ್ರವನ್ನು ಮನದಲ್ಲಿ ಕಲ್ಪಿಸಿಕೊಂಡು ಪೂಜಿಸಬಾರದೇಕೆ?

ಉತ್ತರ: ಕನಸ್ಸಿನಲ್ಲಿ ತಿನ್ನುವುದಾದರೆ ಕಸವನ್ನೇಕೆ ತಿನ್ನಬೇಕು? ಮನದಲ್ಲಿ ಕಲ್ಪಿಸಿಕೊಳ್ಳಲು ಬರುವುದಾದರೆ ಮೂರ್ತಿಯೂ ಬೇಡ, ಚಿತ್ರವೂ ಬೇಡ, ಅಸಲು ದೇವರನ್ನೇ ಮನದ ಕಣ್ಮುಂದೆ ತನ್ನಿ.

ಪ್ರಶ್ನೆ: ಈಗೆಲ್ಲಾ ಗಂಡಂದಿರೇ ಹೆಚ್ಚು ಖರ್ಚು ಮಾಡುತ್ತಾರೆಂದು ಹೆಂಡತಿಯರು ಹೇಳುತ್ತಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಉತ್ತರ: ಈಗೇನು ಆಗೇನು? ಯಾವಾಗಲೂ ಅಷ್ಟೆ. ಎಲ್ಲಾ ಖರ್ಚು ಗಂಡಂದಿರದೇ ಕೇವಲ ಅವರವರ ಹೆಂಡಂದಿರಿಗಾಗಿ.

# ಸಿದ್ಲಿಂಗು ರೆಸಾರ್ಟ್ಸ್

**– ಮಹೇಶ್**

ಅವತ್ತು ಶುಕ್ರವಾರ, ಬೆಳಗ್ಗೆ ಎಂದಿನಂತೆ ಆಫೀಸಿಗೋದೆ. ಅದೂ ಅರ್ಧ ಘಂಟೆ ತಡವಾಗಿ. ಹೋಗ್ತಿದ್ದಂಗೆ ನಮ್ಮ ಬಾಸ್ ಕರ್ದ ಐತೆ ಇವತ್ತು ಗ್ರಾಚಾರ ಅನ್ಕಂಡೇನೇ ಒಳಕೋದೆ. ಆದ್ರೆ ಮಗಾ.. ಒಳ್ಳೆ ಮೂಡಲಿದ್ದ. ಎಲ್ಲೋ ಇವತ್ತು ಹೆಂಡ್ರು ತವ ಜಗಳ ಮಾಡಿಲ್ಲ ಅಂತ ಕಾಣುತ್ತೆ. ಏನ್ ಸಾರ್ ಅಂದೆ, ನೋಡಿ ಸಿದ್ಲಿಂಗು ನಮ್ಮ ಪ್ರಾಜೆಕ್ಟ್ ನಾ ಯು.ಎಸ್. ಕಂಪನಿಯೊಂದು ತಗೋಳ್ತಾವ್ರೆ. ಒಳ್ಳೆ ಅಮೌಂಟಿಗೆ ಡೀಲ್ ಮಾಡ್ದೆ. ಹೆಡ್ ಆಫೀಸಿನಿಂದ ನನ್ಗೆ ಪ್ರಮೋಷನ್ನು, ಬೋನಸ್ಸು, ನಮ್ಮ ಟೀಮ್ ಮೆಂಬರ್ಸಗೆಲ್ಲಾ ಇಂಕ್ರಿಮೆಂಟು ಸ್ಯಾಂಕ್ಷನಾಗೈತೆ ಅಂದ. ಒಡ್ಡೆತ್ತದ್ದು ಹೊಡ್ದಾ ಚಾನ್ಸು ಅಂಕೊಂಡು ಕಂಗ್ರ್ಯಾಟ್ಸು ಸಾ ಅಂತೇಳಿ ಹೊರಗೆ ಬಂದು ಎಲ್ಲಾರ್ಗೂ ಡಂಗುರ ಹೊಡ್ದೆ. ಎಲ್ಲಾರೂ ಬಾಸ್ಗೆ ಕಂಗ್ರ್ಯಾಟ್ಸು ಹೇಳಿದ್ರು. ಶುಭ ಪದ್ದು ಬರ್ತಡೇಗೆ ಅಂತ ತಂದಿದ್ದ ಹೂವಿನ ಬೊಕ್ಕೆ ಸಹ ಬಾಸ್ಗೆ ಕೊಟ್ಟು ಕೈ ಕುಲುಕಿದಳು. ಎಲ್ರೂ ತಮ್ಮ ತಮ್ಮ ಸೀಟಿಗೆ ಬಂದು ಇದೇ ಖುಸಿನಾಗೆ ನಾವೆಲ್ಲಾ ಬಾಸ್ನಾ ಯಾಕೊಂದ್ ರೆಸಾರ್ಟ್ ಪಾರ್ಟಿ ಕೇಳಬಾರ್ದು, ಯಾಗಿದ್ರೂ ವೀಕೆಂಡು ಅಂತಾ ಮಾತಾಡ್ಕೊಂಡ್ರು. ಶುಭ ಒಳಗೋಗಿ ಸಾರ್ ವಿ ನೀಡ್ ರೆಸಾರ್ಟ್ ಹೌಟಿಂಗ್ ಅಂದ್ಲು. ಎಲ್ರೂ ಯೆಸ್ಸಾರ್ ಅಂದ್ರು. ಓಕೆ ಓಕೆ ಅಂದೇಳಿ ನನ್ನ ಚೆಂಬರ್ಗೆ ಕರ್ದ. ರೀ ಸಿದ್ಲಿಂಗು ನೀವೆ ಎಲ್ಲಾರ್ಗೂ ಹೇಳಿದ್ದು ಈಗ ಎಲ್ರೂ ರೆಸಾರ್ಟ್ ಹೌಟಿಂಗ್ ಬೇಕಂತಾವ್ರೆ. ಟು ಡೇಸ್ಗೆ ಎಲ್ರಿಗೂ ಅಂದ್ರೆ ಸುಮಾರು ಒಂದ್ಲಕ್ಷ ಮೇಲಾಗುತ್ತೆ.ಇದನ್ನ ನನ್ನ ಪರ್ಸನಲ್ ಮನಿನನಲ್ಲೇ ಮಾಡ್ಬೇಕು. ಎನ್ಮಾಡೋದು ಸಿದ್ಲಿಂಗು ಅಂದ. ಒಡ್ಡೆತ್ತದ್ದು ಆ ಪಾಟಿ ಕಾಸ್ ಖರ್ಚ್ ಮಾಡ್ಯಾನೆ ಅವ್ನು, ಸಾ ನಿಮ್ಮ ಹಳ್ಳಿ ಕಡೆ ಕರ್ಕೊಂಡ್ ಹೋಗ್ಬಿಡಿ. ಕಾಸ್ ಸ್ಯಾನೆ ಖರ್ಚಾಗೋಲ್ಲ ಅಂದೆ. ಗುಡ್ ಐಡ್ಯಾ ಅಂದ ಆಸ್ಸಾಮಿ. ರೀ ಸಿದ್ದು ನಮ್ಮೂರು ತುಂಬಾ ದೂರ. ನಿಮ್ದು ಹ್ಯಾಗಿದ್ರು ಹತ್ರ. ನಿಮ್ಮೂರ್ಗೆ ಅರೆಂಜ್ ಮಾಡಿ ಎರ್ಡು ಗಾಡಿ ಬುಕ್ ಮಾಡಿ. ನಾಳೇನೆ ಹೊರಡೋಣ ಯಾಗಿದ್ರೂ ಮಂಡೆ ರಂಜಾನ್ ರಜಾ ಬೇರೆ. ಗಾಡೀಲಿ ಇಸ್ಪೀಟು ಹಾಡು ಎಲ್ಲಾ ಹಾಡೋಂಗಿರ್ಲಪ್ಪ ಅನ್ನೋದೆ.

ಆಚೆ ಬಂದು ಎಲ್ಲರ್ಗೂ ಓಕೆನಾ ಅಂತ ಕೇಳ್ದೆ. ಕೆಲವ್ರು ಓಕೆ ಅಂದ್ರು. ಕೆಲವ್ರು ರೆಸಾರ್ಟ್ ಆಗಿದ್ರೆ ಮಜಾ ಇರ್ತಿತ್ತು ಅಂದ್ರು. ಇನ್ಕೆಲವ್ರು ಎಲ್ಲೋದ್ರು ಕುಡ್ದು ತಿಂದ್ ಬರೋದ್ರಾನೆ ಅಂದ್ರು. ಆಯ್ತು ಸರಿ ಅಂತ ಎರ್ಡು ಮೆಟೆಡಾರ್ ಗಾಡಿ ಬುಕ್ ಮಾಡ್ದೆ, ಲಗೇಜ್ ಗಾಡಿ ತರಕಾರಿ ಹೊಡ್ಯೊದು. ಟಾಪ್ ಇತ್ತು. ಒಡ್ಡೆತ್ತದ್ದು ಇಸ್ಪೀಟ್ ಹಾಡಂಗಿರ್ಲಿ ಅಂದಿದ್ನಲ್ಲ. ಊರಲ್ಲಿ ಗೆಳೆಯರಾದ ಮಾದ, ಸೀನ, ಮಂಜ ಎಲ್ರಿಗೂ ಫೋನ್ ಮಾಡೇಳ್ದೆ. ಪಟ್ಟಣದಾವ್ರು, ಸಾಫ್ಟ್ ವೇರ್ ಇಂಜಿನಿಯರ್ಸು ಕನ್ರಾ ಬರೋದು ಒಸಿ ಮನ್ರಂಜನೆ ಎರ್ಪಾಟ್ ಮಾಡ್ಲ. ಒಂದತ್ತು ಸಾವ್ರ ಖರ್ಚಾದ್ರು ನಾ ಕೊಡ್ತೀನಿ ಅಂದೆ. ಓ ಕರ್ಕೊಂಡ್ ಬಾ ಸಿದ್ಲಿಂಗಣ್ಣ ನಾಳೆ ನಾಟಕನೇ ಐತೆ ಊರ್ನಾಗೆ ಅಂದ. ಆಫೀಸ್ನಲ್ಲಿ ಸುಮಾರು ೩೦ ಜನ ಅವ್ರೆ. ಕೆಲವ್ರು ಫ್ಯಾಮಿಲಿನವ್ರು. ಕೆಲವರು ಬ್ಯಾಚುಲರ್ಸ್ ಕೆಲವ್ರು ಹಂಗೆ ಲೈನ್ ಹೊಡ್ಕೊಂಡ್ ಇರೋರು. ಯಲ್ರೂ ಬೊ ಖುಸಿನಾಗಿದ್ರು. ನಾಳೆ ಟ್ರಿಪ್ಪು ಅಂತ. ಸಂಜೆ ಸಾಪಿಂಗ್ ಮಾಡ್ಬೇಕು ಅಂತ ಮೇರಿ, ಜೂಲಿ, ಗಿರೀಶ ಎಲ್ಲ ಜಲ್ದಿ ಹೊರಟ್ರು. ಮರುದಿನ ಪಿಕಪ್ ಸ್ಪಾಟು, ಟೈಮು ಎಲ್ಲ ಫಿಕ್ಸಾಯ್ತು.

ಬೆಳಿಗ್ಗೆ ಎಲ್ರೂ ರೆಡಿ ಆಗಿ ಸ್ಪಾಟಿಗೆ ಬಂದಿದ್ರು. ಕೆಲವ್ರು ಹೆಂಡ್ತೀರ ಜೊತೆ ಕೆಲವ್ರು ಬಾಯ್ ಫ್ರೆಂಡ್ ಜೊತೆ ಬಂದಿದ್ರು. ಇನ್ನು ಕೆಲವರು ಸಿಂಗಲ್. ಗಾಡಿ ಬರೋದು ಸಲ್ಪ ಡಿಲೇ ಆಯ್ತು. ಕೆಲವರ ಡ್ರಸ್ ನೋಡಿ ನಾನು ತಲೆ ಕೆರ್ಕೊಂಡೆ. ಮೇರಿ, ಜೂಲಿ ಎಲ್ಲ ಚಡ್ಡಿ ಟೀ ಶರ್ಟ್ನಲ್ಲಿದ್ರು. ನಮ್ಮ ಹಳ್ಳಿಲಿ ಇವರನ್ನ ಹ್ಯಾಂಗ್ ನೋಡ್ತಾರಪ್ಪ ಅಂತ. ಕೊನೆಗೂ ಡ್ರೈವರ್ ರಂಗ ಬಂದ. ಎಲ್ರೂನೂ ಪಿಕ್ ಮಾಡಿದಾಯ್ತು. ನಾನೊಂದ್ ಗಾಡಿಲಿ ಡ್ರೈವರ್ ಪಕ್ಕ ಕುಳಿತೆ ರೂಟ್ ತೋರಿಸಲು. ಅವನಾಗ್ಲೆ 90 ಏರ್ಸಿ ಗಮ್ ಗುಡ್ತಿದ್ದ. ಇನ್ನೊಂದ್ರಲ್ಲಿ ನಮ್ ಬಾಸ್ ಮುಂದಿದ್ರು. ಗಾಡಿ ಬೆಂಗಳೂರ್ ಬಿಡ್ತು. ಮಂಡ್ಯ ಜಿಲ್ಲೆ ಮೋಟಗಾನಹಳ್ಳಿ ಕಡೆಗೆ. ಲಡ ಲಡ ಅಂತಾ ಸೌಂಡ್ ಬರೋದು. ಏನ್ಲಾ ಇದು ಅಂದೆ, ಸಾ ಟೈರ್ ಬೋಲ್ಟು ಲೂಸ್ ಆಗೈತೆ, ಏನಾಗೊಲ್ಲ ಸಾ ಅಂದ. ಒಡ್ಡೆತ್ತವು ಎಲ್ಲಾವು ಟೈಟ್ ಆಗೋಕೆ ಶುರು ಮಾಡಿದ್ರು. ಬೆಂಗಳೂರ್ ಬಿಟ್ಟು 20 ಕಿಮೀಗೆ ಪೋಲೀಸ್ನೋರು ಹಿಡ್ದು, ಎನ್ಲಾ ಗಾಡಿಲಿ ಅಂದ್ರು, ಸಾ ಮದ್ವೆ ಟ್ರಿಪ್ಪು ಅಂದ ರಂಗ. ಪೋಲೀಸ್ಗೆ ಡೌಟ್ ಬಂದು ಒಳಗ್ನೋಡಿದ, ಏ ಥೂ, ನಿಮಗೇನಾಗೈತೆ ದಾಡಿ, ಎಲ್ರೂ ಅಫಿಷಿಯಲ್ ಇದ್ದಂಗಿದೀರಾ ಅಂದ. ರಂಗ ಅವ್ನ ಕೈ ಬಿಸಿ ಮಾಡಿ ಕಳಿಸ್ದ. ನಮ್ಮ ಬಾಸು ಒಡ್ಡೆತ್ತದು ಮುಖ ಮುಚ್ಕಂಡಿದ್ದ, ಯಾಕಂದ್ರೆ ಈ ತರ ಐಡಿಯಾ ಕೊಟ್ಟದ್ದೇ ಅವ್ನು.

ಸರಿ ಇಸ್ಪೀಟಾಟ ಶುರು ಮಾಡಿದ್ರೆ, ಯಾರ್ಗೋ ಹಾಕಿದ ಕಾರ್ಡ್ ಯಾರಿಗೋ ಬೀಳೋದು, ಅಷ್ಟೊಂದ್ ಷೇಕು. ಗಾಡಿಲೆ ಎಣ್ಣೆ ಬ್ಯಾರೆ ಸುರ್ವಚ್ಕಂಡಿದ್ರು. ಮದ್ದೂರು ಬರ್ತಿದ್ದಂಗೆ ಆಮ್ಲೇಟ್ ಹಾಕೋಕೆ ಸುರು ಮಾಡಿದ್ರು. ಒಬ್ಬ ಹಾಕಿದ್ದು ಇನ್ನೊಬ್ಬನ ಮ್ಯಾಗೆ ಬೀಳೊದು, ಮುಂಡೇ ಮಗಂದು ಷೇಕಿಂಗ್ ಎಫೆಕ್ಟ್ ಅನ್ನೋರು. ರಂಗ ಮಾತ್ರ ಗಾಡಿಲಿ ಜನ ಅವ್ರೆ ಅನ್ನೋದನ್ನ ಮರ್ತು ಓಡಿಸ್ತಿದ್ದ.

ಅಂತೂ ಮೋಟಗಾನಹಳ್ಳಿ ತಲುಪಿಸ್ದ. ಊರ್ ಮುಂದೆ ಜನನೋ ಜನ. ತಮಟೆ ಬ್ಯಾರೆ ಸದ್ದಾಗ್ತಿತ್ತು, ನಾನ್ಯಾರೊ ಹೊಗೆ ಹಾಕಂಡವ್ರೆ ಅಂಕಂಡೆ. ಇಳಿತಿದ್ದಂಗೆ ಮಾದ, ಸೀನ, ಮಂಜ "ಎಲ್ಕಮ್ಮು ಎಲ್ಕಮ್ಮು," ಅಂತ ಚೆಂಡೂವಿನ ಹಾರ ತಕಂಬಂದು ಯಾರ್ ಗಾಕ್ಲಣ್ಣ ಅಂದ. ನಮ್ ಬಾಸ್ನ ಪರಿಚಯಿಸ್ದೆ. ಇನ್ನೆರೆಡು ಹಾರ ಇತ್ತು. ಮೇರಿ, ಗಿರೀಶನನ್ನು ಪರಿಚಯಿಸ್ದೆ. ಅಣ್ಣೊ ಈ ಯಮ್ಮನಿಗೂ ಹಾಕ್ಲ ಹಾರ ಅಂತ ನಾಚ್ಕೆ ಪಟ್ಕೊಂಡು ಹಾಕ್ದ. ನಮ್ಮೂರ ಹೆಂಗಸ್ರು ಎಲ್ರಿಗೂ ಆರತಿ ಮಾಡಿದ್ದೇ ಮಾಡಿದ್ದು. ಗಾಳಿ ಬಂದ್ ದೀಪ ಆರೋದ್ರು ಬರೀ ತಟ್ಟೆನಾಗೆಯಾ ಆರತಿ ಬೆಳಗಿದ್ರು. ಐಕ್ಳನ ಕರ್ದು ಲಗೇಜ್ ಎಲ್ಲ ತಕಂಡ್ ನಡೀರಲ ಅಂದ. ಎಲ್ಲಿ ವ್ಯವಸ್ಥೆ ಮಾಡಿದ್ಯೊ ಅಂದೆ. ಅಣ್ಣೊ ಬಂದ್ ನೋಡಣ್ಣ ಅಂದ. ಊರಾಚೆ ಹೊಲ್ದಾಗೆ ಚಪ್ಪರ ಹಾಕ್ಸಿ ಸಿರಿಯಲ್ ಸೆಟ್ಟು, ಬಾಳೆಕಂಬ, ಮಾವಿನ ತೋರಣ, ಕೆಳಗಡೆಗೆ ರಾಗಿ ಹುಲ್ಲು ಅದ್ರ ಮ್ಯಾಗೆ ಜಮಖಾನ, ಸೈಡೆಲ್ಲಾ ಬೆಡ್ ಶಿಟ್ ಕವರಿಂಗೂ, ನೋಡಣ್ಣೊ ರವಿಚಂದ್ರನ್ ಸಿನಿಮಾ ಸೆಟ್ಟು ಅಂತಾನೆ. ಲಗೇಜ್ ಎಲ್ಲ ಇಟ್ವಿ. ಊಟಕ್ಕೆ ಎನ್ಲ ಅಂದೆ, ಅಣ್ಣೊ ಚಿತ್ರಾನ್ನ ಪಾಯಸ ಅಂದ. ಹುಡುಗರೆಲ್ಲಾ ಹಂಗೆ ಬಯಲ್ಕಡೆ ಹೋಗಿ ಕುಡಿದಿದ್ದನ್ನೆಲ್ಲಾ ಇಳಿಸ್ಕಂಡ ಬಂದ್ರು. ಹುಡ್ಗೀರು "ಸಿದ್ದು ವೇರಿಸ್ ರೆಸ್ಟ್ ರೂಮ್" ಅಂದ್ರು. ಎಲೈತ್ಲಾ ಸೀನ ಅಂದೆ. ಅವ್ನು ಕಣ್ ಬಿಟ್ಕಂಡು ಅಂಗಂದ್ರೆ ಅಂದಿದ್ದಕ್ಕೆ ನಾನು ಅರ್ಥ ಮಾಡ್ಸಿದೆ. ಓ ಅದಾ ಅದ್ರ ವ್ಯವಸ್ಥೆ ಮರ್ತು ಬಿಟ್ನಣ್ಣೊ ಅಂದ. ಅವನಿಗೊಸಿ ಬೈದೆ. ತಾತ್ಕಾಲಿಕ ಯವಸ್ಥೆ ಮಾಡಿದ್ದಾಯ್ತು. ನಾಳೆಗೆನಾದರೂ ಮಾಡಲಾ ಅಂದೆ. ಅರ್ಜೆಂಟಾದ್ರೆ ಅದು ಕಾಯೋಲ್ಲ ಅವ್ರೆ ಯವಸ್ಥೆ ಮಾಡ್ಕೊತಾರಣ್ಣೊ ಅಂತಾನೆ ಒಡ್ಡಹೈದ.

ಊಟ ಮುಗ್ಸಿ ಸಲ್ಪ ರೆಸ್ಟ್ ತಕ್ಕಂಡು ಸಂಜೆ ಊರ್ ಕಡೆ ಕರ್ಕಂಡು ಹೊರ್ಟೆ. ಒಸಿ ಕತ್ಲಾಗಿತ್ತು. ಹಳ್ಳಿ ಎಂದ್ ಮ್ಯಾಕೆ ಕೇಳ್ಬೇಕಾ. ದಾರ್ಯಾಗೆ ಎಮ್ಮೆ, ದನ ಸಗಣೆ ಹಾಕಿರ್ತವೆ. ಹಾಗೇ ಸಣ್ಣ ಐಕ್ಳು ಏನೇನೋ ಮಾಡಿರ್ತಾವೆ. ಅಂತೂ ಕತ್ಲಾಗೆ ತುಳ್ಕೊಂಡು ಒರ್ಸ್ಕೊಂಡು ಗೌಡಪ್ಪನ ಮನೆ ಸೇರಿದ್ವಿ. ಗ್ರಾಮ ಪಂಚಾಯ್ತಿ ಪ್ರೆಸ್ಡೆಂಟು ಅವ್ನು. ಸ್ಯಾನೆ ಖುಸಿ ಆಗೋದಾ ಹುಡ್ಗೀರಾ ಡ್ರಸ್ಸು ನೋಡಿ. ಊರೆಲ್ಲಾ ಸುತ್ತಾಕಿ ಊರ್ ಮುಂದ್ಕೆ ಕರ್ಕೊಂಡ ಹೋದ ಸೀನ. ಕಟ್ಟೆ ಹತ್ರ ಡ್ಯಾನ್ಸು ತಮಟೆ ಎಲ್ಲಾ ತರ್ಸಿದ್ದ. ನಮ್ಮೊಡ್ಗರು ತಂದಿದ್ದ ಬಿಯರೆಲ್ಲಾ ದಾರೀಲೆ ಕುಡ್ಕಂಡ್ಬಿಟ್ಟಿದ್ರು. ಇಲ್ಲೇನೂ ಇಲ್ವ ಸಿದ್ದು ಅಂದ್ರು. ಆಮ್ಯಾಕೆ ಮಂಜನ್ಗೆ ಕೇಳ್ದೆ. ಅಣ್ಣೊ ಐತಣ್ಣೊ ಅಂತಾ ಒಂದ್ ಮಂಕ್ರಿ ಸಾರಾಯಿ ಪ್ಯಾಕೆಟ್ ತರಿಸ್ದ. ಪೆಸಲ್ಲು ಅಂತ ರಾಜ ವಿಸ್ಕಿ ಸಹ ತರ್ಸಿದ್ದ. ನಮ್ಮ ಆಫೀಸ್ನಾಗೆ ಹುಡ್ಗೀರೂ ಬಿಯರ್ ಕುಡಿಯೋರು. ಯಲ್ರೂ ಅದೆ ಒಸಿ ಬಿಟ್ಕಂಡ್ರು. ತಮಟೆಗೆ ಸ್ಟೆಪ್ ಹಾಕಿದ್ರು. ಮೈಕ್ ಸೆಟ್ ಬ್ಯಾರೆ ತರ್ಸಿದ್ದ. ಹಾಡಿಗೊಂಚುರು ಕುಣಿತ ಬೇರೆ. ಎಲ್ರಿಗೂ ಪಂಚಾಯ್ತಿ ಪ್ರೆಸ್ಡೆಂಟ್ ಮನೇಲೆ ಊಟ ಆಯ್ತು. ಅಮ್ಯಾಕೆ ಬಿಡಾರ ಕಡೆ ಹೊರಟ್ವಿ. ಚಳಿ ಬೇರೆ. ಚೆನ್ನಾಗಿ ಟೈಟಾಗಿದ್ದಕ್ಕೆ ಎಲ್ಲ ಜಮಖಾನದ ಮ್ಯಾಗೆ ಬಿದ್ಕೊಂಡ್ರು. ಬೆಳ್ಳಿಗೆ ಸುರ್ವಯತಪ್ಪ ಇವ್ರ ಕಾಟ. ಮಂಜ, ಮಾದ, ಸೀನ ನಾಪತ್ತೆ. ಎಲ್ರಿಗೂ

ಅರ್ಜೆಂಟು. ನನ್ಗೆ ಪಿಕಲಾಟ. ಆಮ್ಯಾಕೆ ಕೆರೆ ಕಡೆ ಬ್ಯಾಚ್ ಬ್ಯಾಚಾಗಿ ಅವ್ರೆ ಹುಡುಕೊಂಡೋಗಿ ಸ್ನಾನನೂ ಮುಗ್ಸಿ ಪ್ರೆಶಾಗಿ ಬಂದ್ರು. ನಮ್ಮ ಬಾಸ್ ಕೂಲಾಗಿದ್ದ. ಎಲ್ಲಾ ಚೆನ್ನಾಗಿ ಬೈಕೊಂಡ್ಬಂದ್ರು. ಮಂಜ, ಸೀನ ಆಗ್ಬಂದ್ರು. ಎಲ್ಲೋಗಿದ್ರಲಾ? ವ್ಯವಸ್ಥೆನೆ ಇಲ್ಲಾ ಅಂದೆ. ಸಿದ್ಲಿಂಗಣ್ನೊ ಆ ಟೈಂ ಬಂದ್ರೆ ಯವಸ್ಥೆ ಅದೆ ಆಗತ್ಯೆತೆ ಅಂದ. ಮತ್ತೆ ಎಲ್ರಿಗೂ ಉಪ್ಪಿಟು ಕಾಪೀ ಅರೆಂಜ್ಮೆಂಟ್ ಮಾಡಿವ್ನಿ ಅಂತ ಸುಬ್ಬಭಟ್ಟರ ಹೋಟೆಲ್ಗೆ ಕರ್ಕೊಂಡೋದ. ಒಸಿ ಅಡ್ಜೆಸ್ಟ್ ಮಾಡ್ಕಳ್ಳಿ ಅಂತೇಳಿ ಎಲ್ರಿಗೂ ತಿಂಡಿ ತಿನ್ನಿಸ್ದ. ಆಮ್ಯಾಕೆ ಇಸ್ಪೀಟು, ಹಾಡು, ಡ್ಯಾನ್ಸು, ಕಬ್ಬಡಿ ಎಲ್ಲಾ ಹಾಡಿದ್ರು. ಸಂಜೆ ನಾಟಕದ ಕಡೆ ಹೊರಟ್ವಿ. ಅಲ್ಲಿ ಎಲ್ಲಾ ಕಲಾವಿದ್ರುನಾ ಪರಿಚಯ ಮಾಡಿಸ್ದ. ದ್ರೌಪದಿ ಪಾತ್ರಕ್ಕೆ ಕಲಾಸಿಪಾಳ್ಯದಿಂದ ಭಾಗ್ಯಳನ್ನು ಕರೆಸಿದ್ರು. ಜನ ಎಲ್ಲಾ ಜಮಾಯಿಸಿದ್ರು. ನಮ್ಮೋರೆಲ್ಲಾ ಮುಂದೆ ಕೂತಿದ್ರು. ಬೀಡಿ ಹೊಗೆ, ಸಾರಾಯಿ ವಾಸ್ನೆ ಸುತ್ತ ತುಂಬ್ಕಂಡಿತ್ತು. ಮಂಜ ಬಂದು ನನ್ನತ್ರ ಸಿದ್ಲಿಂಗಣ್ಣ, ದ್ರೌಪದಿ ಪಾತ್ರದ ಭಾಗ್ಯ ಎಣ್ಣೆ ಹಾಕಿ ಟೈಟಾಗವ್ಳೆ ಎದ್ದೇಳ್ತಿಲ್ಲ. ನಿಮ್ ಮೇರಿ ಕೈಲಿ ಆ ಪಾತ್ರ ಮಾಡ್ಸಿದ್ರೆ ಹ್ಯಾಂಗೆ ಅಂದ. ಬಡ್ಡೆತ್ತಾದೆ ಅವಳ್ಗೆ ದ್ರೌಪದಿ ಯಾರು ಅಂತಾನೆ? ಗೊತ್ತಿಲ್ಲ ಕನ್ಲಾ ಅಂದೆ. ನೀನೊಪ್ಸಣ್ನೊ ನಾನ್ ನೋಡ್ಕೊತೀನಿ ಅಂದ. ಒಂದೆರಡು ಟಿವಿ ಸೀರಿಯಲ್ನಲ್ಲಿ ಸಣ್ಣ ಪಾತ್ರ ಮಾಡಿದ್ದ ಮೇರಿಗೆ ಫಿಲ್ಮ್ ನಟಿ ಆಗೊ ಹುಚ್ಚು ಬ್ಯಾರೆ ಇತ್ತು. ಅವಳನ್ನು ಒಪ್ಸಿ ಕಳಿಸ್ದೆ. ಒಂದಿನಾನೂ ಸೀರೆ ಉಟ್ಕಳ್ಳದ ಮೇರಿ ದ್ರೌಪದಿಯಾಗಿ ಸ್ಟೇಜ್ ಮ್ಯಾಗೆ ಬಂದಿದ್ದೆ ತಡ ನಾ ಮುಂದು ನಾ ಮುಂದು ಅಂತ ಅವಳ್ಸುತ್ತ ತುಂಬ್ಕಂಡ್ರು ನಮ್ಮಳ್ಳಿ ಜನ. ದುಶ್ಯಾಸನ ಸ್ಯಾನೆ ಖುಸಿಯಾಗಿದ್ದ. ಪ್ರೇಕ್ಷಕರಿಂದ ಸಿಳ್ಳೆ, ಚಪ್ಪಾಳೆ ಎಲ್ಲ ಗಿಟ್ಸಿ ಮಿಂಚಿದ್ಳು ಮೇರಿ. ಅಂತೂ ರಾತ್ರಿ ಅಲ್ಲೇ ಕಳೀತು. ಬೆಳಿಗ್ಗೆ ಪಂಚಾಯ್ತಿ ಪ್ರೆಸ್ಡೆಂಟ್ ಮನೆ ಹಿತ್ತಲಲ್ಲಿ ಇರೊ ಟಾಯ್ಲೆಟಿಗೆ ಪರ್ಮಿಷನ್ ತಗೊಂಡಿದ್ದೆ. ಎಲ್ರೂ ಥ್ಯಾಂಕ್ಸ್ ಸಿದ್ದು ಅಂದ್ರು ಅದ್ಕೆ. ಆಮ್ಯಾಕೆ ಒಸಿ ಗಿಲಿ ದಾಂಡಾಟ ಆಡ್ಸಿ ಮಧ್ಯಾನ ಎಲ್ರೂನಾ ಟೆಂಪೊಗೆ ತುಂಬಿಸ್ದೆ. ಡ್ರೈವರ್ ರಂಗ ಮಸ್ತಾಗಿತ್ತು ಕಣಣ್ಣ ಅಂದ. ಬರ್ತಾ ಗಾಡಿ ಕುಲ್ಕಿದ್ರು ಯಾರ್ಗೂ ಎಚ್ರ ಇರ್ಲಿಲ್ಲ. ನಾಟ್ಕ ನೋಡಿ ಎಲ್ಲಾ ಪಾಚಿ ಮಾಡಿದ್ರು. ಬೆಂಗಳೂರಿಗ್ ತಂದ್ಬಿಟ್ಟಿದ್ದಾಯ್ತು.

ಎಲ್ರೂ ಮೂರು ದಿನ ರಜಾ ಅಪ್ಲೈ ಮಾಡಿದ್ರು. ಆಫೀಸಲ್ಲಿ ನಾನು, ಬಾಸು ಟೀ ಬಾಯ್ ಎಂಕ್ಟ ಮಾತ್ರ. ಅಲ್ಲಾ ಸಿದ್ದು ಇಷ್ಟೊಂದ್ ಒಳ್ಳೆ ಟ್ರಿಪ್ ಅರೆಂಜ್ ಮಾಡಿದ್ದೆ. ಆದ್ರೂ ಯಾಕೆಲ್ರೂ ರಜಾ ಹಾಕವ್ರೆ ಅಂದ್ರು, ಸರ್ ಅವರೆಲ್ಲಾ ಸಿಟಿನವ್ರು ಸರ್, ಫಾರಂ ಜನ ಟೊಳ್ಳು. ನಾನು ನೀವು ಹಳ್ಳಿಯೋರು ಸರ್ ಅದ್ಕೆ ನಾವ್ ಗಟ್ಮುಟ್ಟು, ಒಟ್ಟು ಬಿಲ್ ಹದಿನೈದು ಸಾವ್ರ ಆಯ್ತು ಸಾರ್ ಅಂದೆ. ಅಷ್ಟೆನಾ..! ಯಂಬತ್ತು ಸಾವ್ರ ಉಳೀತು ನಂದೂ ಅಂದ್ರು. ಈಗ ಟ್ರಿಪ್ ಅಂದ್ರೆ, ಆ ದರಿದ್ರ ಬಾಸ್ ಜೊತೆ ನಾವ್ ಬರಲ್ಲಾ ಅಂತವೆ. ಆದ್ರೆ ಬಾಸ್ಗೆ ಈಗ ನಾನು ಫೇವರೆಟ್. ಇನ್ಕ್ರಿಮೆಂಟ್ ಜಾಸ್ತಿ ಆಯ್ತದಾ ನೋಡ್ಬೇಕು. ಆಮ್ಯಾಕೆ ಇನ್ನೊಂದಿಸ್ಯ ಟೆಂಪೋನಾಗೆ ಬಾಸ್ ಹೆಂಡ್ತಿ ಬಂದಿದ್ರಲ್ಲ ಅವ್ರ ಸೊಂಟ ಮುರ್ಕಂಡ್ಯೆತಂತೆ.

**ಸವಿ ಮಲ್ಲಿಗೆ**

## ಸಮ್ ಥಿಂಗ್ ಡಿಫರೆಂಟು -ರುಚಿ

**-ಸುಗುಣ ಮಹೇಶ್**

ಅಡಿಗೆ ಮಾಡೋಕೆ ಬರದೆ ಇರೋರಿಗಾಗಿ ಈ ಸಮ್ ತಿಂಗ್ ರುಚಿಯ
ಕೈರುಚಿ.. ಆದಷ್ಟು ಕಲಿಯೋಕ್ಕೆ ಪ್ರಯತ್ನಿಸಿ":
ನಮೂರ್ನಾಗೆ ರಾಗಿ ಮುದ್ದೆ ಅಂದ್ರೆ ಸಾಕು ಬಾಯಿ ನೀರು ಬರುಸ್ಕೊಂಡು
ತಿಂತಾರೆ... ಅದು ಶಕ್ತಿ ಕೊಡ್ತೈತ್ರಿ ನೀವು ಕಲಿರಿ ಒಮ್ಮೆ ಮನೆನಲ್ಲಿ ಮಾಡಿ.
ಆದ್ರೆ ಊಟಕ್ಕೆ ನಮ್ಮನ್ನ ಮಾತ್ರ ಕರಿಬೇಡ್ರಿ.
– ಈಗ ಮುದ್ದೆ ಮಾಡೋದು ಹೇಗೆ ಅಂತಾ ಹೇಳ್ತೀನಿ ಕೇಳಿ:
ರಾಗಿ ಮುದ್ದೆಗೆ ರಾಗಿ ಹಿಟ್ಟು ಬೇಕೇ ಬೇಕು.
ಉಪ್ಪು ಬೇಕಾದಷ್ಟು
ನೀರು ಬೇಕಾದರೆ ಇಲ್ಲದಿದ್ದರೆ ಬರಿ ಹಿಟ್ಟೆ ತಿನ್ನಿ...
– ರಾಗಿ ಮುದ್ದೆ ಮಾಡುವ ವಿಧಾನ:
ನೀರನ್ನು ಒಂದು ತಟ್ಟೆಯಲ್ಲಿ ಹಾಕಿ ಅದಕ್ಕೆ ರಾಗಿ ಹಿಟ್ಟು ಹಾಕಿ ಒಂದು
ಲೋಟ ಉಪ್ಪನ್ನು ಹಾಕಿ ಚೆನ್ನಾಗಿ ಕಲಸಿ ಉಂಡೆ ಕಟ್ಟಿ ಸಾರು ಮಾಡಿದ
ನಂತರ ತಿನ್ನಿ.. ಇಲ್ಲವೇ ಕಲಸಿದ ಹಿಟ್ಟನ್ನು ಹಾಗೆ ತಿಂದು ಮುಗಿಸಿ.
"ಮುದ್ದೆಗೆ ಬಸ್ಸಿನ ಸಾರು ಚೆನ್ನ ಅಂತಾ ಹೇಳ್ತಾರೆ ನೋಡಿ ನಿಮ್ಗೂ ಮಾಡೋಕೆ
ಬಂದ್ರೆ ಪ್ರಯತ್ನಿಸಿ"

### "ಬಸ್ಸಿನ ಸಾರು" ಮಾಡುವ ವಿಧಾನ :

- ಸಾರು ಮಾಡಲು ಬೇಕಾದ ಸಾಮಗ್ರಿಗಳು:
ಸಾರಿಗೆ ನೀರು ಬೇಕೇ ಬೇಕು
ಎಷ್ಟೋಂದು ಕಾಳುಗಳಲ್ಲಿ ಬಸ್ಸಿನ ಸಾರು ಮಾಡ್ತಾರೆ. ಈಗ ಹುರುಳಿ
ಕಾಳಿನ ಬಸ್ಸಿನ ಸಾರು ಮಾತ್ರ ಹೇಳ್ತೀನಿ ಕೇಳಿ.
ಈರುಳ್ಳಿ, ಬೆಳ್ಳುಳ್ಳಿ ಬೇಕಾದ್ರೆ
ಜೀರಿಗೆ ಬೇಕಾದ್ರೆ ಒಂದು ಸೌಟು
ಅರಿಶಿಣ ಒಂದು ಡಬ್ಬ ಅದೂ ಬೇಕಾದ್ರೆ
ಹುಣಸೆಹಣ್ಣಿಂದಲೇ ತೆಗೆದ ರಸ ಅಂಗಡಿಯಲ್ಲಿ ಸಿಗೋ ಹುಣಸೆ ರಸ
ಒಲ್ಲೆ ಅಚ್ಚವಾಗಿರೋ ಖಾರದ ಪುಡಿ
ಸಾರಿಗೆ ಅಂತಲೇ ಮಾಡಿರೋ ಸ್ವಚ್ಛ ಸಾರಿನ ಪುಡಿ
ಕರಿಯಬೇವಿನ ಸೊಪ್ಪು
ಹಸಿಮೆಣಸಿನಕಾಯಿ
ಉಪ್ಪು ಇಲ್ಲದಿದ್ದರೆ ಸಕ್ಕರೆ
ಎಣ್ಣೆ ಇಲ್ಲದಿದ್ದರೆ ಬೆಣ್ಣೆ...
ದಂಟಿನ ಸೊಪ್ಪು ಅಥವಾ ಕಂಟಿನ ಸೊಪ್ಪು

### - ಸಾರು ಮಾಡುವ ವಿಧಾನ:

ಮೊದಲು ಅದೇ ಕಂಟು, ದಂಟು ದಂಟಾಗಿರೋ ಸೊಪ್ಪಿದೆಯಲ್ಲ
ಅದನ್ನ ನೀರಲ್ಲಿ ಆದ್ರೆ ತೊಳಿರಿ ಇಲ್ವಾ ಹಂಗೆ ಕತ್ತರಿಸಿ ಹಾಕಿ. ಹುರುಳಿ
ಕಾಳು ಜೊತೆ ಸೇರಿಸಿ ಚೆನ್ನಾಗಿ ಬೇಯಿಸಿಕೊಳ್ರಿ.. ಬೇಯಿಸಿಲ್ಲ ಅಂದ್ರೆ
ಅಷ್ಟೇ ತಿನ್ನೋಕೆ ಆಗೋಲ್ಲ ಅಂತ ಅನ್ಸುತ್ತೆ. ಸೊಪ್ಪು ಮತ್ತು ಕಾಳು
ಬೆಂದ ಮೇಲೆ ಅದರಲ್ಲಿ ನೀರು ಹಾಕಿದ್ದೀರಿ ತಾನೆ ಅಮೇಲೆ ಹಾಗೆ ಬರಿ
ಸೊಪ್ಪುಕಾಳು ಹಾಕಿದ್ದರೆ ಮುಗಿತು ಕಥೆ... ಸಾರು ಮಾಡೋಕೆ ಆಗೋಲ್ಲ.
ಎಲ್ಲ ಬೆಂದ ನಂತರ ನೀರು ಮತ್ತು ಸೊಪ್ಪುಕಾಳನ್ನು ಒಬ್ಬರಿಂದ
ಇನ್ನೊಬ್ಬರನ್ನ ಬೇರೆ ಮಾಡಿಕೊಂಡು ಬಿಡಿ. ಸೊಪ್ಪುಕಾಳು ಮತ್ತು ನೀರು
ಬೇರೆ ಮಾಡಿಲ್ಲ ಅಂದ್ರೆ ಬಸ್ಸಿನ ಸಾರಿಗೆ ಬೇಜಾರು (ಸೊಪ್ಪು ಕಾಳು ಬೇರೆ
ಮಾಡಿದ ಕರ್ಮ ನಿಮ್ಮನ್ನು ಕಾಡದಿರಲಿ). ಬೇರೆಯಾದ ನಂತರ ನೀರು
ಹಾಗೇ ಇಟ್ಟುಕೊಳ್ಳಿ ಮೋರಿಗೆ ಚೆಲ್ಲದೆ.

ಮೋರಿಗೆ ಹೋಗದ ನೀರಿಗೆ ಆಗಲೇ ಹೇಳಿದಂತೆ ಉಪ್ಪು ಬೇಕಾದ್ರೆ ಉಪ್ಪು
ಇಲ್ವೆ ಸಕ್ರೆ ಯಾವುದೇ ಹಾಕಿದ್ರು ಒಂದು ದೊಡ್ಡ ಲೋಟದಷ್ಟು ಸುರಿರಿ.
ಆನಂತರ ಅದೇ ನೀರಿಗೆ ಕರಿಯಬೇವಿನ ಸೊಪ್ಪು, ಹಸಿಮೆಣಸಿನಕಾಯಿ,
ಸಾರಿನ ಪುಡಿ (೧ ಕಪ್), ಅಚ್ಚವಾದ ಖಾರದ ಪುಡಿ(೨ ಕಪ್), ಈರುಳ್ಳಿ,
ಬೆಳ್ಳುಳ್ಳಿ, ಕಾಯಿತುರಿ ಕೈಗೆ ಸಿಕ್ಕಿದಷ್ಟು, ಹುಣಸೆ ರಸ ಒಂದು ಕಪ್
ಇವೆಲ್ಲವನ್ನು ಆ ನೀರಿಗೆ ಹಾಕಿ ಚೆನ್ನಾಗಿ ಕಲಾಯಿಸಿ ಬಿಡಿ. ಆಗ ನೋಡಿ
ಸಾರು ರೆಡಿ... ಬಸ್ಸಿನ ಸಾರನ್ನು ಮುದ್ದೆಯ ಜೊತೆ ಚೆನ್ನಾಗಿ ತಿಂದು ಹೊಟ್ಟೆ
ನೋವನ್ನು ನಿಯಂತ್ರಿಸಿಕೊಳ್ಳಿ.

ಇನ್ನೊಂದು ಸಮ್ ತಿಂಗ್ ರುಚಿಯೊಂದಿಗೆ ಸಾಧ್ಯವಾದರೆ ಬರ್ತೀನಿ
ಅಲ್ಲಿವರೆಗು ಕ್ಷೇಮವಾಗಿರಿ.
ವಂದನೆಗಳು,
ಸುಗುಣ ಮಹೇಶ್, ಸಮ್ ತಿಂಗ್ ರುಚಿ ವಿಭಾಗ, ಟಿವಿ ೯೦

## ಹುಲ್ಲಿನ ಭರ್ಫಿ:

– ಶ್ರೀಮತಿ ವಿನುತಾ ರಮೇಶ್

ಬೇಕಾದ ಪದಾರ್ಥಗಳು:
ಒಣ ಹುಲ್ಲು – ೧೦೦ ಗ್ರಾಂ
ಒಣ ದ್ರಾಕ್ಷಿ – ೧೦೦ ಗ್ರಾಂ
ಗೋಡಂಬಿ – ೧೦೦ ಗ್ರಾಂ
ಕಡಲೆ ಕಾಯಿ ಎಣ್ಣೆ – ರುಚಿಗೆ ತಕ್ಕಷ್ಟು
ಮಸಾಲೆ ಪದಾರ್ಥಗಳು – ನಿಮಗೆ ಬೇಕಾದದ್ದು ಹಾಗು ರುಚಿಗೆ ತಕ್ಕಷ್ಟು
ಮಾಡುವ ವಿಧಾನ:
ಒಣ ಹುಲ್ಲನ್ನು ಸಣ್ಣಗೆ ಹೆಚ್ಚಿ. ಬಾಂಡಲಿಗೆ ಸ್ವಲ್ಪ ಎಣ್ಣೆಯನ್ನು ಹಾಕಿ ಚೆನ್ನಾಗಿ ಹುರಿಯಿರಿ.
ನಂತರ ಹುರಿದ ಹುಲ್ಲಿಗೆ ಮಸಾಲೆ ಬೆರೆಸಿ ಒಗ್ಗರಣೆ ಹಾಕಿ.
ನಂತರ ದ್ರಾಕ್ಷಿ, ಹುರಿದ ಗೋಡಂಬಿ ಹಾಕಿ.ಮನೆಗೆ ಯಾರಾದರು ನೆಂಟರು ಬಂದರೆ ತಿನ್ನಲು ಕೊಡಿ. ಅವರನ್ನು ಕೆಲವು ಗಂಟೆ ಗಮನಿಸಿ. ಏನು ಆಗಲಿಲ್ಲ ಎಂದರೆ  ನಂತರ ನಿಮ್ಮ ಯಜಮಾನರಿಗೆ ತಿನ್ನಲು ಕೊಡಿ.

### ಅರಳು ಮಲ್ಲಿಗೆ

## ::: ನನ್ನ ಪುಟ್ಟ ಅನನ್ಯ :::

– ವಿಸ್ಮಯ ವದನ ಉಲ್ಲಾಸ್

ತಂಗಿ ಎಂದರೆ ನನಗೆ ಇಷ್ಟ
ಅವಳ ನೋಟ ಬಹಳ ಸ್ಪಷ್ಟ
ಅವಳು ಹುಟ್ಟಿದ ದಿನ ಸೋಮವಾರ
ಎತ್ತಲಿಕ್ಕೆ ಅವಳು ಬಹು ಹಗೂರ
ನನ್ನ ತಂಗಿ ಜೊತೆ ಆಡುವೆ
ಆಡಿ ನಕ್ಕು ನಲಿಯುವೆ
ಅವಳು ಮಲಗಿದರೆ ಬೋರು
ಅವಳು ಎದ್ದರೆ ಆಟ ಬಲು ಜೋರು
ಅವಳು ಅತ್ತರೆ ನಾನು ನೋಡಲಾರೆ
ಅವಳ ಆಟವನ್ನು ನಾನು ಆಡಲಾರೆ
ಅವಳ ಪುಟ್ಟ ಕೈ ಕಾಲು
ಬಡಿದರೆ ಸಂಗೀತದ ಸಾಲು
ಅವಳು ಮಲಗಿದರೆ ಏಳಿಸುವೆ
ಮಾತಾಡು ಎಂದು ಕಾಡಿಸುವೆ
ಅವಳ ಹೆಸರೇ ಅನನ್ಯ
ಅವಳನ್ನು ಪಡೆದ ನಾನೇ ಧನ್ಯ
ಅನನ್ಯ ಅಂದರೆ ಅದ್ವಿತೀಯ
ಎಲ್ಲರಂತೆ ಇವಳು ವಿಧೇಯ
ನಾನು ಅವಳ ಅಣ್ಣ ವಿಸ್ಮಯ
ನನ್ನನ್ನು ನೋಡಿದರೆ ಆಗುವಳು ತನ್ಮಯ



## Standing on the highest point in Europe – An experience

-Neha Nagaraj

I am happy to write a few lines about my experience on my visit to Jungfrau in Switzerland, the highest point of Europe-which is 4158m high. It takes about 10-15 minutes to reach the highest viewpoint- phooof...!! it was a tuff time climbing those stairs. When I reached on top; the scene which I saw was something so beautiful, that the beauty of nature there could never be witnessed anywhere else. The snow was like a beautiful bed of white flowers- with tracks here and there for the largest roller-coaster in the world. After looking at the mesmerizing scene until my heart was content, I left the place very much unwillingly. It took me much lesser time to get down the steep steps yet my eyes looked towards the viewpoint longing for another view. I miss that view so much, but still cherish those moments.

## Facts On The Brain

Karthik.S.K, 9th STD

1) An average adult male brain weighs about 3 pounds and a female brain is about 2.8 pounds.
2) A newborn baby's brain grows almost 3 times during the course of its first year.
3) The biggest part of the brain is the cerebrum. It makes up 85% of the brain's weight.
4) The brain receives about 100 million pieces

of information at one moment that reaches the nervous system through receptors in the skin.

5) The adult human brain is about 2% of the total body weight.

6) One human brain generates more electrical impulses in a single day than all of the world's telephones put together.

7) Average blood flow to the brain is 1.5 pints per minute, about one-eighth of the heart's total output.

8) The brain consumes about one-fifth of all the energy used by the body.

9) The brain forms about 1⁄50$^{th}$ of the whole body.

10) The largest accurately measured normal human brain is 6.3 pounds.

## HUMOUR IN SCIENCE

**Collection: Suraiya Noor Fathima, 6$^{th}$ Std**

All the physicists are playing hide and seek. Einstein is the 'den' and stands against the wall with his eyes closed and counts till 100 to enable all the physicists to run and hide. At the count of 100 Einstein turns around and finds Newton standing there.
He screams, "Newton, you are out!" Newton says, "No, I 'm not!"
Einstein says, "Yes, you are. I can see you here in front of me".
Newton says, "I'm not out. Pascal is."
Einstein is a bit confused and starts to scratch his head and beard.
Newton says "Here, Let me explain"
He draws a square one meter by one meter on the floor and stands in the middle of it and says, "Newton per meter square is a Pascal, so it's Pascal who's out not me"

@@@

A Mathematician, an engineer and a physicist were traveling through Scotland when they saw a black sheep through the window of the train.
"Aha", says the engineer, "I see that Scottish sheep are black."
"Hmm", says the physician, "You mean that some Scottish sheep are black".
"No", says the mathematician, "All we know is that there is at least one sheep in Scotland, and that at least one side of that one sheep is black!"

@@@

One day the zoo-keeper noticed that the orang-utan was reading two books - the Bible and Darwin's The Origin of Species. In surprise he asked the ape, "Why are you reading both those books"?
"Well," said the orang-utang, "I just wanted to know if I was my brother's keeper or my keeper's brother."

@@@

An unemployed biologist got a new job at the zoo. They offered him to dress up in a gorilla's skin and pretend to be a gorilla so people will keep coming to the zoo.
On his first day on the job, the guy puts on the skin and goes into the cage. The people all cheer to see him. He starts really putting on a show, jumping around, beating his chest and roaring.
During one acrobatic attempt, he loses his balance and crashes through some safety netting, landing square in the middle of the lion cage! As he lies there stunned, the lion roars. He's terrified and starts screaming, "Help, Help!"
The lion races over to him, places his paws on his chest and hisses, "Shut up or we'll both lose our jobs!"

@@@

Many dead animals in the past changed to fossils while others preferred to be oil.

@@@

Genetics explain why you look like your father and if you don't why you should.

ಜ್ಞಾನ ಮಲ್ಲಿಗೆ

## Self-healing electronics could work longer and reduce waste

**Based on Science update**

**- Ramesh C**

A team of University of Illinois engineers has developed a self-healing system that restores electrical conductivity to a cracked circuit in less time than it takes to blink.

"Rather than having to build in redundancies or to




This shows self-healing electronics. Microcapsules full of liquid metal sit atop a gold circuit. (Top) When the circuit is broken, the microcapsules rupture (center), filling in the crack and restoring the circuit (bottom).

build in a sensory diagnostics system, this material is designed to take care of the problem itself."

As electronic devices are evolving to perform more sophisticated tasks, manufacturers are packing as much density onto a chip as possible. However, such density compounds reliability problems, such as failure stemming from fluctuating temperature cycles as the device operates or fatigue. A failure at any point in the circuit can shut down the whole device. This is known as thermal shutdown.

The concept of a self-healing polymer materials, decided to adapt their technique for conductive systems. They dispersed tiny microcapsules, as small as 10 microns in diameter, on top of a gold line functioning as a circuit. As a crack propagates, the microcapsules break open and release the liquid metal contained inside. The liquid metal fills in the gap in the circuit, restoring electrical flow.

The self-healing system also has the advantages of being localized and autonomous. Only the microcapsules that a crack intercepts are opened, so repair only takes place at the point of damage. Furthermore, it requires no human intervention or diagnostics, a boon (means blessing) for applications where accessing a break for repair is impossible, such as a battery, or finding the source of a failure is difficult, such as an air- or spacecraft.

"In an aircraft, especially a defense-based aircraft, there are miles and miles of conductive wire," "You don't often know where the break occurs. The autonomous part is nice -- it knows where it broke, even if we don't."

Next, the researchers plan to further refine their system and explore other possibilities for using microcapsules to control conductivity. They are particularly interested in applying the microcapsule-based self-healing system to batteries, improving their safety and longevity.

## ಸುದ್ದಿ ಮಲ್ಲಿಗೆ

ಈ ವರ್ಷ ಕುವೈತ್‌ಕನ್ನಡ ಕೂಟ ತನ್ನ ಕಾರ್ಯಕ್ರಮಗಳ ಸಾಲಿಗೆ ಒಂದು ನೂತನ ಕಾರ್ಯಕ್ರಮವನ್ನು ಸೇರಿಸಿದೆ. ಅದೇ ದೇಶದ ಎಲ್ಲಾ ಶಾಲೆಗಳ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧಾವಳಿ, ಕೆಕೆಕೆ ಟ್ಯಾಲಂಟ್ಸ್ ಶೋ. ೨೦೧೧ ರ ಚೊಚ್ಚಲ ಕಾರ್ಯಕ್ರಮದ ಉಸ್ತುವಾರಿಯನ್ನು ಮರಳ ಮಲ್ಲಿಗೆ ಸಮಿತಿ ವಹಿಸಿಕೊಂಡಿತ್ತು. ಐದು ಶಾಲೆಗಳ ೩೫ ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಭಾರತೀಯ ವಿದ್ಯಾ ಭವನ್ ಮತ್ತು ಕಾರ್ಮಲ್ ಸ್ಕೂಲ್ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದವು.

ಕನ್ನಡ ನಾಡಿನ ಸಂಘಗಳಲ್ಲಿ ತನ್ನದೇ ಛಾಪು ಮೂಡಿಸಿರುವ "ತುಳು ಕೂಟ" ದ ೨೦೧೨-೧೩ ನೇ ಸಾಲಿನ ಆಡಳಿತ ಮಂಡಳಿಯ ಶ್ರೀ ರಮೇಶ್ ಕಿಡಿಯೂರ್ ಅಧ್ಯಕ್ಷರಾಗಿಯೂ, ನಮ್ಮ ಮರಳಮಲ್ಲಿಗೆ ಸಮಿತಿಯ ಸದಸ್ಯ ಶ್ರೀ ತಾರೇಂದ್ರ ಶೆಟ್ಟಿಗಾರ್ ಉಪಾಧ್ಯಕ್ಷರಾಗಿಯೂ, ಕೂಟದ ಇನ್ನೊಬ್ಬ ಸದಸ್ಯೆ ಶ್ರೀಮತಿ ಜಯಲಕ್ಷ್ಮಿ ಕಾರ್ಕಳ ಜಂಟಿ ಕಾರ್ಯದರ್ಶಿಯಾಗಿಯೂ ನೇಮಕಗೊಂಡಿದ್ದಾರೆ. ಇವರಿಗೆ ಮತ್ತು ತುಳು ಕೂಟಕ್ಕೆ ಕು.ಕ.ಕೂ ದ ಪರವಾಗಿ ಮರಳ ಮಲ್ಲಿಗೆ ಶುಭಕೋರುತ್ತದೆ.

## ಆರೋಗ್ಯ ಮಲ್ಲಿಗೆ

### A LAUGH A DAY KEEPS THE DOCTOR AWAY.

-William Reville

The actor Cary Grant had a long and successful career during most of which he maintained a very good physical appearance. His press-agent grew tired of being asked what age Cary Grant was. He had already been asked that same question twice the morning he received a telegram from a fan-magazine editor, asking concisely, 'How old Cary Grant?' He sent back an equally concise reply: 'Old Cary Grant fine. How you? Please give free rein to your mirth as you contemplate this amusing anecdote. Humour and laughter is not only an enjoyable sensation in its own right, but it may also be good for your health.

The idea that humour is good for the general health has been put forward by various people, going back even to the time of Aristotle. A 13th century surgeon, Henri de Mondeville, proposed that laughter be used as an aid to recovery from surgery. He also noted that negative emotions might interfere with recovery. Richard Mulcaster, a 16th century physician, believed that laughter was a physical exercise and, as such, was healthy. Laughter has been recognised as an important aid to digestion and our ancestors acknowledged

this by employing jesters and clowns to entertain them both during and after dinner. Herbert Spenser proposed, in 1860, that laughter is a way of releasing excess tension, and, therefore, is an important restorative mechanism. This idea has since been extended to propose that the beneficial physical effects of laughter are caused by psychological factors i.e. laughter reduces
anxiety and thereby influences and improves various bodily functions.

The idea that laughter and humour are beneficial for health is currently quite popular in medical circles. This popularity owes much to the case of Norman Cussins who published his story 'Anatomy of an Illness' in the New England Journal of Medicine in 1976 and later in a best selling book in 1979. Cussins was afflicted with a disease called Ankylosing Spondylitis, a progressive disease inflaming the joints of the spine. He recovered remarkably from this disease after self-treatment with Vitamin C, to combat inflammation, and laughter, to produce positive emotions.

The case of Norman Cussins excited a lot of interest in the medical profession. However, it is not unambiguously clear that Norman Cussins literally laughed his way back to health. In Ankylosing Spondylitis, cases of spontaneous remission can occur and this may have been what happened in Cussins's case. The whole subject deserves serious scientific investigation. Morally and socially, laughter has not been well regarded throughout history. Prior to the last hundred years or so, laughter in public was about as socially acceptable as vigorous breaking of
wind would be today. In Medieval times, physicians located each emotion in some organ of the body. Love for example was seated in the heart - if they had chosen another particular organ which would seem to be a more logical contender, we would be sending each other quite different shapes on Valentine's day. The seat of laughter was the spleen, apparently to indicate that laughter was viewed as a 'low' form of behaviour.

It is no surprise that Victorian England was not big on laughter. Nevertheless, Queen Victoria did deliver one immortal quip in comment on a man charged with the attempted murder of the British Prime Minister, and who was pleading insanity - 'We do not believe that anyone could be insane who would wish to murder a Conservative Prime Minister'. Neither was laughter popular with the Church. The Puritans in particular looked upon it with disdain and permitted it only when it served to illustrate a moral lesson. Sigmund Freud distinguished between malign and benign laughter. Laughter was malign, he argued, when it indicated an underlying pathology, i.e. served as an outlet for underlying sexual
and aggressive impulses. Benign laughter did not indicate any underlying pathology. An example of benign humour is where a person masters unfortunate or unpleasant situations by turning them around and making a joke of them.

In humour, as in everything else, there are different levels of quality. This can range from the sparkling wit of Oscar Wilde to the crudity of the drinking-club 'blue' joke. In my opinion the ethnic joke is fairly low on the totem pole. The object of these jokes is to highlight supposed negative characteristics in the target group, e.g. in the Irish joke, Paddy is always stupid. Of course this does not mean that many such jokes cannot be funny, simply that, as a genre, they are cruel and biased. Here is one I read recently, of American origin - Question: 'What is a real quick way to learn Irish?' Answer: 'Repeat the following words in quick succession - WHALE, OIL, BEEF, HOOKED'.

Since the mid 1940s it has gradually come to be well accepted that tension and stress are bad for the health. We know that someone with a 'Type A' personality, characterised by seriousness, cynicism, stress, concern with time, hostility and impatience, has a greater risk of having a heart attack than the 'Type

B’ personality. Type B personalities are defined as those who do not exhibit the characteristics itemised above for Type A, i.e. they are less serious, more relaxed, not

particularly competitive, slow to anger, more patient, etc. If psychological factors such as stress and tension can cause illness, and they can, then, surely, opposing psychological factors such as a sense of humour, which will lessen and deflate stress and tension, must have a positive effect on health.

Although it remains to be unambiguously demonstrated that humour is good for your health, there is no doubt that it enhances the quality of life. There are few more pleasant sensations than sharing a laugh with friends. Well, I will leave it at that, and I hope that your opinion of my musings on this subject is more favourable than Dr. Samuel Johnson’s reply to an author who had sent him his manuscript for review - ‘Your manuscript is both good and original; but the part that is good is not original and the part that is original is not good’. Or, Groucho Marx’s reply under similar circumstances - ‘From the moment I picked your book up until I laid it down I was convulsed with laughter. Some day I intend reading it’.

(This article first appeared in The Irish Times, February 26, 2003.)

## ಚಲುವ ಮಲ್ಲಿಗೆ

# ಭಾಷಾ ಲೋಕ

**–ಗಾಯತ್ರಿ ರಮೇಶ್**

ಬೃಹತ್ ಬೆಂಗಳೂರಿನಲ್ಲಿ ಒಂದು ಪುಟ್ಟ ಬಡಾವಣೆ. ಅದರ ಹೆಸರೇ ವಿನಾಯಕ ಬಡಾವಣೆ. ಈ ಬಡಾವಣೆಗೆ ಬಿ. ಟಿ. ಎಸ್. ಬಸ್ಸು ಬಂದು ನಿಂತಾಗ, ಕಲ್ಲೇಶಿ ಓಡುತ್ತಲೇ ಬಂದು ಹತ್ತಿದ. ಬಸ್ಸು ಮುಂದೆ ನಡೆದಂತೆ ಇತ್ತ ಕಂಡಕ್ಟರ್ ‘ಟಿಕೆಟ್ ಟಿಕೆಟ್’ ಎನ್ನುವ ಕೂಗು ಶುರು ಮಾಡಿದ. ಅಷ್ಟು ಹೊತ್ತಿಗೆ ಕಲ್ಲೇಶಿ ಸುಧಾರಿಸಿಕೊಂಡು “ತೆಗೀಲಿಕತ್ತೀನ್ರಿ ಸಾರ ರೋಕ್ಕಾನ” ಅಂತ ಕೂಗಿದ. ಆಗ ಕಂಡಕ್ಟರ್ ಕಲ್ಲೇಶಿ ಹತ್ತಿರ ಬಂದು “ಬಸ್ ಹತ್ತಿದ್ದು ಆಯ್ತುಲ್ಲಾ, ಇನ್ನು ಎಲ್ಲಿಗೆ ಹತ್ತುತ್ತೀಯಪ್ಪಾ?. ನೋಡು ಇದು ಸಿಟಿ ಬಸ್ಸು ಟಾಪ್ ಮೇಲೆಲ್ಲ ಜನನ ಹತ್ಸಲ್ಲ ನಾನು” ಎಂದ. ಅದಕ್ಕೆ ಕಲ್ಲೇಶಿ ತಿಳಿ ಹೇಳ್ತಾ “ಇಲ್ಲಾ ಸಾರಾ ನಾನು ಹೇಳಿದ್ದು ನನ್ನ ಕಿಸಿಯಾಗಿಂದ ರೋಕ್ಕನ ತೆಗೀಲಿಕತ್ತೀನಿ ಅಂತ”. ಕಂಡಕ್ಟರ್ “ಏನದು ಕಿಸಿ? ಕಸಿ ಅಂದ್ರೆ ಗಿಡ ಕಸಿ ಮಾಡೋದು ಗೊತ್ತು. ಆದರೆ ಕಿಸಿ ನಲ್ಲಿ ಏನ್ ಮಾಡ್ತಾರೆ?.” ಅದಕ್ಕೆ ಕಲ್ಲೇಶಿಗೆ ಏನು ಮಾಡೋದು ತಿಳಿಯದೆ ತನ್ನ ಜೇಬು ತೋರಿಸಿ “ಕಿಸಿಯಾಗಿಂದ” ಎಂದು ಹೇಳಿ ಕೊನೆಗೂ ದುಡ್ಡು ಕೊಟ್ಟು ಟಿಕೆಟ್ ತೊಗೊಂಡ. ಅಷ್ಟೊತ್ತಿಗೆ ಆಕಡೆ ಒಂದು ಹೆಂಗಸು “ಒರ ಅಲಸುರ್ ಕೋಡಂಗ ” ಅಂತ ಕೂಗಿದಳು. ಅದಕ್ಕೆ ಕಂಡಕ್ಟರ್ “ಓ ಪಕ್ಕಾ ಕನ್ನಡದವಳು ಕರಿತಾ ಇದ್ದಾಳೆ” ಅಂತ ಹೋದ.

ಇತ್ತ ಕಲ್ಲೇಶಿ ಹೆಂಡತಿ ಸೂಗಮ್ಮ ತನ್ನ ಪಕ್ಕದ ಮನೇಲಿ ಇರೋ ಮಂಗಳೂರಿನ ಮಂಗಳ ಮನೆಗೆ ಬಂದಳು. “ಮಂಗಳ ನಂಗೆ ಯಾಕೋ ಮೈಯೆಲ್ಲಾ ವಜ್ಜಾ ಅಗ್ಲಿಕತ್ತದ. ಜ್ವರ ಬಂದದೋ ಏನೋ. ದವಾಖಾನಿಗೆ ಹೋಗ್ಬರೋಣ” ಅಂದಳು. “ಬನ್ನಿ ಸೂಗಮ್ಮ, ಏನು ಆಯಿತು ನಿಮಗೆ? ಏತಕ್ಕೆ ಸುಸ್ತು ಆಗಿ ಕಾಣಿಸುತ್ತಾ ಇದ್ದೀರಾ?. ಏನು ‘ವಜ್ಜಾ’ ಅಂದರೆ?” ಎಂದು ಹೇಳಿ ಮೈ ಮುಟ್ಟಿ ನೋಡಿ “ಅಯ್ಯೋ ಜ್ವರ ಬಂದಿದೆ. ಬೋಂಡಾ ಕುಡಿಯಿರಿ. ಅದು ಈ ಸಮಯದಲ್ಲಿ ದೇಹಕ್ಕೆ ಒಳ್ಳೆಯದು” ಎಂದಳು. ಅದಕ್ಕೆ ಸೂಗಮ್ಮ “ತಲಿ ನೆಟ್ಟ್ಗೈತೆನ್ರಿ. ಜ್ವರ ಬಂದರ ಬೋಂಡಾ ತಿಂತಾರ?. ಅದು ಎಣ್ಣಿಲ ಕರದದ್ ಅದಲ್ರೀ”. ಅದಕ್ಕೆ ಮಂಗಳ “ನೀವು ಬೋಂಡಾ ಕುಡಿಯಬೇಕು. ತಿನ್ನ ಬಾರದು. ಅದರ ನಾರು ಯಾರಿಗೂ ತಿನ್ನುವುದಕ್ಕೆ ಬರುವುದಿಲ್ಲ ಸೂಗಮ್ಮ.” ಎಂದಳು. ಅದಕ್ಕೆ ಸೂಗಮ್ಮ " “ಎಂತದಾ ಅದು?, ಬೋಂಡಾ ಕರದ ಎಣ್ಣಿನ ಕುಡಿಬೇಕಾ”. ಇದನ್ನೆಲ್ಲಾ ಕೇಳುತ್ತಿದ್ದ ಮಂಗಳನ ಮಗ ಎದ್ದು ಪುಸ್ತಕ ತಂದು ಎಳನೀರಿನ ಚಿತ್ರ ತೋರಿಸಿ “Aunty my mummy is talking about this. Do you understand now.” ಅಂದ. ಅವನು ಹೇಳಿದ್ದು ಅರ್ಥ ಆಗದಿದ್ದರೂ ಬೋಂಡಾ ಅಂದರೆ ಎಳನೀರು ಅಂತ ಅರ್ಥ ಆಯಿತು ಸೂಗಮ್ಮಂಗೆ. ಅಷ್ಟು ಹೊತ್ತಿಗೆ ಮಂಗಳ ಕೇಸರಿಬಾತು ತಂದು ಕೊಟ್ಟು “ತೆಗೆದುಕೊಳ್ಳಿರಿ. ಸ್ವಲ್ಪ ತಿನ್ನಿ. ಶಕ್ತಿ ಬರುತ್ತದೆ” ಅಂದರು. ಅಷ್ಟು ಹೊತ್ತಿಗೆ ಪಕ್ಕದ ಮನೆಯ ಗುಲಾಬಿ ಬಾನು ಬಂದು “ನಿಮ್ದುಕೆ ಮನೇಲಿ ಏನು ತಿಂಡಿ?. ಖುಶುಬು ಬಾಹರ್ ವರಗೂ ಬರ್ತಾ ಇದೆ ಅಲ್ಲಾ” ಅಂದಳು. ಅದಕ್ಕೆ ಮಂಗಳ, ಬಾನುನ ಒಳಗೆ ಕರೆದು “ಬನ್ನಿ ಬಾನು ಅವರೇ. ನೀವೂ ಸ್ವಲ್ಪ ಕೇಸರಿಬಾತು ತೆಗೆದುಕೊಳ್ಳಿ. ನಮ್ಮ ಸೂಗಮ್ಮನವರಿಗೆ ಜ್ವರ ಬರುತ್ತಿದೆ, ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗೋಣ, ನೀವೂ ಬನ್ನಿ” ಅಂದಳು. ಅದಕ್ಕೆ ಬಾನು “ಓ ಮುಶ್ಕಿಲ್ ಇಲ್ಲಾ, ನಿಮ್ದುಕೆ ಮುಂದೆ ಹೋಗಿ ನಾನು ದರ್ವಾಜಾದು ಬಂದ್ ಮಾಡಿ ಬರ್ತೀನಿ " ಎಂದು ಬಾಗಿಲು ತೋರಿಸಿದರು.

ಹೀಗೇ ಬೆಂಗಳೂರಿನ ಹಲವಾರು ಬಡಾವಣೆಗಳಲ್ಲಿ ನಡೆ ನುಡಿಗಳಲ್ಲಿ ವೈವಿಧ್ಯತೆ ಇದ್ದರೂ, ಮನಸ್ಸಿನ ಬಾಂಧವ್ಯದಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಜೀವನ ಸಾಗಿಸುತ್ತಿದ್ದಾರೆ. ಇವರೆಲ್ಲರಿಗೂ ನನ್ನ ನಮನ.

# ಹೀಗೂ ಕೆಲವು ಹಾಡುಗಳು

**- ವಿನುತಾ ರಮೇಶ್**

ಹೆಂಡತಿ: ಅತ್ತೆ ಮಾವ ಯಾರು ಇಲ್ಲ, ಅಡಿಗೆ ಮಾಡುವರು ಇಲ್ಲವೇ
ಇಲ್ಲ. ಬನ್ರಿ ಹೋಟೆಲ್ಗೆ. ಕೆಂಪು ದೋಸೆ ಬಿಳಿ ಚಟ್ನಿಯ
ಹಾಕುವ ಹೊಟ್ಟೆಗೆ.

ಗಂಡ: ಅನಿಸುತಿದೆ ಯಾಕೋ ಇಂದು, ಗರಿ ಗರಿಯಾಗಿದೆ ದೋಸೆ
ಎಂದು. ಮಾಯದ ಅಡಿಗೆ ಮನೆಯಿಂದ ನಿನಗಾಗಿ ಬಂದಿದೆ
ಎಂದು. ಆಹಾ ಎಂಥ ಮಧುರ ಪರಿಮಳ ತಿನ್ನು ಹುಡುಗಿ ನೀನು
ದೋಸೆ ಹಾಗೆ ಸುಮ್ಮನೆ ॥ಅತ್ತೆ॥

ಹೆಂಡತಿ: ಕನಸಲೂ ದೋಸೆ, ನನಸಲೂ ದೋಸೆ, ನನ್ನಾಣೆ, ನಿನ್ನಾಣೆ
ದೋಸೆಯು ಚೆನ್ನ, ತಿನ್ನಲು ಚೆನ್ನ, ನೋಡುವಾಗ ನಿನ್ನ, ನೀನೆ

ಬಲು ಚೆನ್ನ, ಮಸಾಲೆದೋಸೆ ನೀನು, ನಿನಗಿಂತ ಯಾರಿಲ್ಲ ಚೆನ್ನ ||ಅತ್ತೆ||

ಗಂಡ: ಬೆಸುಗೆ, ಬೆಸುಗೆ, ಬೆಸುಗೆ, ಬೆಸುಗೆ.. ಬೆಸುಗೆ ಬೆಸುಗೆ. ಗರಿಗರಿ ದೋಸೆಗೆ ಬೆಣ್ಣೆಯ ಬೆಸುಗೆ, ಟೊಮೇಟೊ ದೋಸೆಗೆ ಚಟ್ನಿಯ ಬೆಸುಗೆ ಮಸಾಲೆ ದೋಸೆಗೆ ಪಲ್ಯದ ಬೆಸುಗೆ, ರವೆಯ ದೋಸೆಗೆ ಈರುಳ್ಳಿ ಬೆಸುಗೆ, ಸೆಟ್ ದೋಸೆಗೆ ಸಾಗುವೆ ಬೆಸುಗೆ, ತಿನ್ನುವ ಬಾಯಿಗೆ ದೋಸೆಯ ಬೆಸುಗೆ ಜೀವನವೆಲ್ಲ ದೋಸೆಯ ಬೆಸುಗೆ.. ನನ್ನ ನಿನ್ನ ಬೆಸೆದ ದೋಸೆಯ ಬೆಸುಗೆ ||ಅತ್ತೆ||

**ದಾಸರ ಪದಗಳು (ಪುರಂದರ ದಾಸರ ಕ್ಷಮೆ ಕೋರಿ)**

ಕಲ್ಲು ಸಿಕ್ಕರೆ ಕೊಳ್ಳಿರೋ ನೀವೆಲ್ಲರೂ
ಕಲ್ಲು ಸಿಕ್ಕರೆ ಕೊಳ್ಳಿರೋ
ಕಲ್ಲಿನ ಸವಿಯನ್ನು ಬಲ್ಲವರು ಎದುರು ನಿಲ್ಲರು
ಕಲ್ಲು ಸಿಕ್ಕರೆ ಕೊಳ್ಳಿರೋ
ಸ್ಟ್ರೈಕು ಮಾಡಲು ಗಾಜು ಒಡೆಯಲು
ಅಡ್ಡ ಬಂದವರ ತಲೆ ತೂತ ಮಾಡಲು
ನಿಮ್ಮ ಬೇಡಿಕೆಗಳು ಸುಲಭದಿ ಈಡೇರಲು
ಕಲ್ಲು ಸಿಕ್ಕರೆ ಕೊಳ್ಳಿರೋ ನೀವೆಲ್ಲರೂ ||ಕಲ್ಲು||
ಸೈಜುಗಲ್ಲು, ಬೆನಚುಕಲ್ಲು, ಕಪ್ಪು ಕಲ್ಲು,
ಒರಳುಕಲ್ಲು, ಕೆಂಪು ಕಲ್ಲು ಪಚ್ಚೆ ಕಲ್ಲು
ಎಂದು ಭೇದ ಭಾವವ ಮಾಡದೆ
ಕಲ್ಲು ಸಿಕ್ಕರೆ ಕೊಳ್ಳಿರೋ ||ಕಲ್ಲು||

## ಸ್ಪರ್ಧಾ ಮಲ್ಲಿಗೆ

**ರಾಜ್ಯೋತ್ಸವ ಸಂಚಿಕೆಯ ಸ್ಪರ್ಧಾ ಅಂಕಣದ ಉತ್ತರಗಳು (ಸರಿ ಉತ್ತರಗಳು)**

**ಕಳುಹಿಸಿದವರು: ಶ್ರೀಮತಿ ಸುಗುಣ ಮಹೇಶ್**

೧) ಡಾ. ರಾಜಕುಮಾರ್ ನಟಿಸಿದ ಮೂರು ದಾನವ ಪಾತ್ರಗಳು ಮತ್ತು ಆ ಚಿತ್ರಗಳನ್ನು ಹೆಸರಿಸಿ

ಭೂಕೈಲಾಸ – ಭಸ್ಮಾಸುರ
ಹಿರಣ್ಯಕಶಿಪು – ಭಕ್ತ ಪ್ರಹ್ಲಾದ
ಬಬ್ರುವಾಹನ ಅರ್ಜುನ – ಬಬ್ರುವಾಹನ

೨) ಮೇ ಡೇ ಯಾವುದರ ಸಂಕೇತ?

ಚಿಕಾಗೋದ 'ಹೇ' ಮಾರು ಕಟ್ಟೆಯ ಬಳಿ ಸಭೆ ಸೇರಿದ್ದ ಅಮಾಯಕ ಕಾರ್ಮಿಕರ ಮೇಲೆ ಪೊಲೀಸರ ಗುಂಡಿನ ಮಳೆ. ಹುತಾತ್ಮರಾದ ಕಾರ್ಮಿಕರ ಸ್ಮರಣಾರ್ಥ.

೩) ಅಂಬೇಡ್ಕರ್ ಅವರಿಗಿದ್ದ ಮಾರಣಾಂತಿಕ ಖಾಯಿಲೆ ಯಾವುದು?

ಡಯಾಬಿಟಿಸ್

೪) ನಾಗವಲ್ಲಿ ಮತ್ತು ಶ್ರೀ ಶ್ರೀ ಶಿವಕುಮಾರಸ್ವಾಮಿಗಳ ಮಧ್ಯದ ನಂಟು ಯಾವುದು?

ನಾಗವಲ್ಲಿಯಲ್ಲಿ ಶಿಕ್ಷಣ

೫) After 10 months the planet earth surface temperature will be warmer by how many degrees celcius?

4 degrees than now

೬) ಬಂಡಿ ಉತ್ಸವ ನಡೆಯುವುದು ಯಾವಾಗ?

ವೃಷಭ ಮಾಸದ ಮುಂದಿನ ಮಳೆಗಾಲ

೭). World Environment Day is observed on which day every year.

ಜೂನ್ ೫

೮). Whose case of "mercy killing" was turned down by the Supreme Court of India during this year?

ಅರುಣಾ ಶಾನ್ ಬಾಗ್

೯). What was the World Health Day's theme this year?

Anti Microbial Resistance ( AMR)

೧೦.) ಜತು ಗೃಹ - ಇದರ ಅರ್ಥ ಏನು?

ಅರಗಿನ ಮನೆ – ಶಕುನಿ ಪಾಂಡವರನ್ನು ಮೋಸದಿಂದ ಕೊಲ್ಲಲು ಅರಗಿನ ಮನೆಯನ್ನು ಕಟ್ಟಿಸಿದ್ದು

ಸ್ಪರ್ಧಾ ಮಲ್ಲಿಗೆಯ ವರ್ಷವಿಡೀ ನಡೆದ ನಾಲ್ಕೂ ಸಂಚಿಕೆಗಳ ಸ್ಪರ್ಧಾ ಫಲಿತಾಂಶಗಳ ಆಧಾರದ ಮೇಲೆ ಹಿರಿಯ ಸದಸ್ಯರ ವಿಭಾಗದ ಮತ್ತು ಮಕ್ಕಳ ವಿಭಾಗದ "ಜಾಣರ ಜಾಣ" ಬಹುಮಾನಕ್ಕೆ ಪಾತ್ರರಾದವರು:

ಹಿರಿಯರ ವಿಭಾಗ: **ಶ್ರೀಮತಿ ಸುಗುಣ ಮಹೇಶ್**
ಮಕ್ಕಳ ವಿಭಾಗ: **ಮಾ. ಕಾರ್ತಿಕ ಶ್ಯಾಮ ಕುಮಾರ್**

## ಅನಿಸುತಿದೆ ಮಲ್ಲಿಗೆ

ಈ ಸಂಚಿಕೆಯಲ್ಲಿ ಕುವೈತ್ ಕನ್ನಡ ಕೂಟದ ಚಟುವಟಿಕೆಗಳನ್ನು ನಮ್ಮ ಮರಳ ಮಲ್ಲಿಗೆ ಮತ್ತು ಅಂತರ್ಜಾಲದಲ್ಲಿ ನೋಡಿ ಗಮನಿಸುತ್ತಿರುವ ಕನ್ನಡಿಗರು, ನಾಡಿಗರು ಮತ್ತು ಹೊರನಾಡಿನಲ್ಲಿ ನೆಲಸಿರುವ ಕನ್ನಡಿಗರಿಗೆ ನಮ್ಮ ಕುರಿತು ಏನೆನಿಸುತಿದೆ ಎಂದು ತಿಳಿದುಕೊಳ್ಳುವ ಆಸಕ್ತಿಯೊಂದಿಗೆ ಅಂತರ್ಜಾಲದ ಮೂಲಕ ಸಂಪರ್ಕದಲ್ಲಿದ್ದ ಮತ್ತು ನಮ್ಮ ಕೂಟದ ಬಗ್ಗೆ ತಿಳಿದಿದ್ದ ನಾಡಿಗರಿಗೆ ತಮ್ಮ ಅನಿಸಿಕೆಗಳನ್ನು ತಿಳಿಸಲು ಕೋರಿದ್ದೆವು. ಅವರ ಅನಿಸಿಕೆಗಳನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ.

**ಸಿಂಗಾಪುರದಿಂದ ಶ್ರೀಮತಿ ಸುಮನ ವೆಂಕಟ್...**

ನನಗೆ ಕು.ಕ.ಕೂ. (ಕುವೈತ್ ಕನ್ನಡ ಕೂಟ) ಬಗ್ಗೆ ಹೆಚ್ಚಿನ ಮಾಹಿತಿ ಸಿಕ್ಕಿದ್ದು, ಕೂಟದ ಹಲವು ಬ್ಲಾಗ್ ಗೆಳೆಯರ ಮೂಲಕ. ದೂರದ ಊರಲ್ಲಿ, ಹೊರ ದೇಶದಲ್ಲಿ ಇರುವಾಗ ನಮ್ಮ ಮಣ್ಣು, ಸಂಸ್ಕೃತಿ ಮತ್ತು ಕಲೆ ಬಗ್ಗೆ ತುಡಿತ ಹೆಚ್ಚುವುದು ಸಾಮಾನ್ಯದ ಸಂಗತಿ. ಆದರೆ ಅದರ ಬಗ್ಗೆ ಏನು ಮಾಡಬಲ್ಲೆವು ಅನ್ನೋದೇ ದೊಡ್ಡ ಪ್ರಶ್ನೆ. ಕು.ಕ.ಕೂ. ಈ ತುಡಿತವನ್ನು ಅರ್ಥ ಮಾಡಿಕೊಂಡಿರುವುದೇ ಅಲ್ಲದೆ, ಅದನ್ನು ಉಳಿಸಿ ಬೆಳೆಸುವ ಕೆಲಸವನ್ನು ಮಾಡುತ್ತಿದೆ. ಮಕ್ಕಳಿಗೆ ನಮ್ಮ ಇತಿಹಾಸ, ಪುರಾಣಗಳ ಅರಿವು

ಮೂಡಿಸುವುದಕ್ಕಾಗಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡು ಅವರ ಪ್ರತಿಭೆಯನ್ನು ಬೆಳೆಸುತ್ತಿದೆ. ಇತ್ತೀಚಿಗೆ ನಡೆದ ಕನ್ನಡ ರಾಜ್ಯೋತ್ಸವಕ್ಕೆ ಕು.ಕ.ಕೂ. ಸದಸ್ಯರು ಕೊಟ್ಟ ಸೃಜನಾತ್ಮಕವಾದ ಕಾರ್ಯಕ್ರಮ 'TV 90' ಅಭಿನಂದನಾರ್ಹ. ನಕ್ಕು ನಕ್ಕು ಹೊಟ್ಟೆ ಹುಣ್ಣಾಗಿಸಿ ಕೊಂಡರೂ, ಅದರಲ್ಲಿ ಅವರು ಕೊಟ್ಟ ಸಂದೇಶಗಳು ಸಕಾಲಿಕವಾಗಿದ್ದವು!

ಮೊದಲಿಗೆ ಹೆಸರು ಕೇಳಿದಾಗ 'ಏನಪ್ಪಾ ಇದು' ಅಂತ ಅನಿಸಿದರೂ, ಯೋಚಿಸಿದಾಗ ತುಂಬಾ ಅರ್ಥ ಗರ್ಭಿತವಾದ ಹೆಸರು 'ಮರಳಮಲ್ಲಿಗೆ'. ಮರಳುಗಾಡಿನಲ್ಲಿ ಅರಳುತ್ತಿರುವ ಸಾಹಿತ್ಯಕ್ಕೆ ಅನುವು ಮಾಡಿಕೊಡುತ್ತಿರೋ ಪತ್ರಿಕೆ. ಮಾತೃ ಭಾಷೆಯಲ್ಲಿ ಬರೆಯುವ ಹುಮಸ್ಸಿರುವವರಿಗೆ, ಒಂದು ವೇದಿಕೆಯಾಗಿ ಇದು ಕಾರ್ಯ ನಿರ್ವಹಿಸುತ್ತಿದೆ. ಕು.ಕ.ಕೂ. ಹಾಗೂ ಮರಳಮಲ್ಲಿಗೆ ಎರಡಕ್ಕೂ ಶುಭ ಹಾರೈಸುತ್ತಾ ಇನ್ನೂ ಹೆಚ್ಚು ಹೆಚ್ಚು ಉನ್ನತ ಸ್ಥಾಯಿಗೇರುವಂತಾಗಲಿ ಎಂದು ಆಶಿಸುತ್ತೇನೆ.

ಪ್ರೀತಿಯಿಂದ.. , ಸುಮನ

**ಮಲೇಶಿಯಾದಿಂದ ಡಾ. ಗುರುಮೂರ್ತಿ ಹೆಗಡೆ ..**

ಪ್ರತಿಭೆ ಬೆಳೆದಾಗ ಮಾತ್ರ ಬೆಳೆಸಿದವಗೆ ಮತ್ತು ಬೆಳೆದವಗೆ ಹೆಮ್ಮೆ. ಬೆಳವಣಿಗೆಯ ಹಂತದ ಸವಾಲುಗಳನ್ನು ಮೆಟ್ಟಿ ನಿಂತಾಗ ಸಿಗುವ ಆನಂದ ಬೆಳೆಸಿದವಗೆ ಮಾತ್ರ ಗೊತ್ತು. ಹೊರ ಜಗತ್ತಿಗೆ ಸದಾ ನಗುವ ನೀಡುವ ಹಾಸ್ಯಗಾರನ ಒಳಜಗತ್ತಿನ ನೋವು ಹೇಗೆ ಕಾಣಿಸುವುದಿಲ್ಲವೋ, ಹಾಗೆಯೇ ಒಂದು ಮಗು, ಒಂದು ಗಿಡ, ಒಂದು ಕಂಪನಿ, ಅಂತೆಯೇ ಒಂದು ಪತ್ರಿಕೆ ಕೂಡ ನೋವು ನಲಿವುಗಳ ಹೊಯ್ದಾಟದಲ್ಲೇ ಬೆಳೆಯುತ್ತದೆ. ಈ ನಿಟ್ಟಿನಲ್ಲಿ ಕುವೈತ್ ಕನ್ನಡ ಕೂಟದ "ಮರಳ ಮಲ್ಲಿಗೆ"ಎಲ್ಲರಿಗೂ ಒಂದು ಅನುಕರಣೀಯ ವಾಗಿದೆ ಎನ್ನಲು ಹೆಮ್ಮೆ ಎನಿಸುತ್ತದೆ. ದೂರದ ದೇಶದಲ್ಲಿದ್ದು ಕರುನಾಡಿನ ನೆನಪುಗಳ ಹೊತ್ತಿಗೆಯನ್ನು, ಸರಿ ಹೊತ್ತಿಗೆ ತಲುಪಿಸುವಲ್ಲಿ ಅಲ್ಲಿನ ಕನ್ನಡ ಸಂಘದ ಪದಾಧಿಕಾರಿಗಳ ಸಾಹಸ ಅಭಿನಂದನಾರ್ಹ. "ದೇಹ ದೂರವಾದರೂ ಮನಸು ಹತ್ತಿರವೇ" ಎಂಬ ಕವಿ ಮಾತು ನೆನಪಿಗೆ ಬರುತ್ತದೆ. ಸುಂದರ ಬರಹಗಳ, ಹೊಸ ವಿನ್ಯಾಸಗಳ, ನವೀನ ವಿಚಾರಗಳ, ಹೊಸ ಸಾಹಸಗಳ "ಮರಳ ಮಲ್ಲಿಗೆ" ಎಲ್ಲರನ್ನು ಮರುಳು ಮಾಡುತ್ತಿರಲಿ. ಅದನ್ನು ಸದಾ ಓದುವ ಸೌಭಾಗ್ಯ ನಮ್ಮದಾಗಲಿ.

ಕುವೈತ್ ಕನ್ನಡ ಸಂಘಕ್ಕೆ ಹಾರ್ದಿಕ ಅಭಿನಂದನೆಗಳು.

ಡಾ.ಗುರುಮೂರ್ತಿ ಹೆಗಡೆ

**Manasa Jakkali from Brisbane, Australia.....**

Kuwait Kannada Koota is the best ever heard kannada koota organised by the kannadiga's out there. When I open my mouth about the horanaada kannadigaru always encourage my fellow kannadiga's here in Brisbane by taking the name of Kuwait kannada koota.. some people get annoyed and said, why don't you go to Kuwait?... I always say, if I get a chance definitely will do.

Kuwait Kannada Koota come up with new thoughts and ideas, just a month ago I watched a video directed, screened, scripted by the normal people, no one can say that they are new to that field... well acted and directed, my hearty congrats to all the team members for the great effort in making all that happen...

**ಲಂಡನ್ ನಿಂದ ಚೇತನಾ ನಂಜುಂಡ್ ಮತ್ತು ನಂಜುಂಡ್ ಭಟ್..**

ಕುವೈತ್ ಕನ್ನಡ ಕೂಟ ಹೊರನಾಡಿನ ಸಾಮಾಜಿಕ ಸಂಘಗಳಲ್ಲಿ ತನ್ನ ಛಾಪನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಬೆಳೆಸುತ್ತಾ ಬಂದಿದೆ. ಇಂಗ್ಲೇಂಡಿನಲ್ಲಿರುವ ನಮಗೆ ಈ ಕೂಟ ಹೊರನಾಡ ಕನ್ನಡ ಸಂಸ್ಥೆಗಳಿಗೆ ಮಾದರಿಯಾಗಬಹುದು ಎನಿಸುತ್ತಿದೆ. ಇಪ್ಪತ್ತೇಳು ವರ್ಷಗಳಿಂದ ನಿರಂತರ ನಾಡು ನುಡಿ ಸೇವೆಯಲ್ಲಿ ತೊಡಗಿರುವ ಕು.ಕ.ಕೂ. ಗೆ ನಮ್ಮ ಅಭಿನಂದನೆಗಳು.

ಕು.ಕ.ಕೂ. ಎಂದರೆ ನಮಗೆಲ್ಲಾ ಮೊದಲಿಗೆ ನೆನಪಾಗುವುದು "ಮರಳ ಮಲ್ಲಿಗೆ". ಮರಳುಗಾಡಿನಲ್ಲಿ ಅರಳಿರುವ ಈ ಮಲ್ಲಿಗೆಯ ಘಮ ಸಪ್ತಸಾಗರಗಳನ್ನೂ ದಾಟಿ ಎಲ್ಲೆಡೆ ಪಸರಿಸಿ, ಇಲ್ಲಿ ಯುರೋಪ್ ಖಂಡದವರೆಗೂ ಹರಡಿ, ಸರಳ ಸುಂದರ ಸಾಹಿತ್ಯ ರಸದ ಕಂಪು ಸೂಸುತ್ತಿದೆ. ಉದಯೋನ್ಮುಖ, ಪ್ರತಿಭಾನ್ವಿತ, ಪ್ರಖ್ಯಾತ ಕವಿ, ಕವಿಯಿತ್ರಿಗಳಿಂದ ರಚಿತವಾದ ಬರಹಗಳ ಭಂಡಾರ ಈ ಮರಳ ಮಲ್ಲಿಗೆ. ಕ್ಲಿಷ್ಟವಲ್ಲದ, ಸರಳ ಶೈಲಿಯ ಬರಹಗಳು ಮನಸೆಳೆಯುತ್ತವೆ. ಅಲ್ಲದೆ, ಮಲ್ಲಿಗೆಯಲ್ಲಿ ಪ್ರಕಟಗೊಳ್ಳುವ ವಿಷಯಗಳ ವೈವಿಧ್ಯತೆ, ಬರಹಗಳಲ್ಲಿನ ಗಾಢತೆ ಮೆಚ್ಚುಗೆ ಗಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಮರಳ ಮಲ್ಲಿಗೆಯ ಇನ್ನೊಂದು ಮಹತ್ತರ ವಿಶೇಷವೆಂದರೆ ಉದಯೋನ್ಮುಖ ಬರಹಗಾರರಿಗೆ ವೇದಿಕೆಯನ್ನು ಒದಗಿಸಿಕೊಟ್ಟು, ಬರವಣಿಗೆಯ ಹವ್ಯಾಸವನ್ನು ಉತ್ತೇಜಿಸಿ, ಆ ದಿಶೆಯಲ್ಲಿ ಅವರಲ್ಲಿನ ಪ್ರತಿಭೆಯನ್ನು ಬೆಳೆಸಿ ಪೋಷಿಸಲು ಸಹಾಯ ಮಾಡುತ್ತಿರುವುದು ನಿಜಕ್ಕೂ ಪ್ರಶಂಸನೀಯ ಕಾರ್ಯ. ಅದರ ಜೊತೆಗೆ ಕನ್ನಡದ ಸಾಹಿತ್ಯದ ಬೆಳವಣಿಗೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾಗಿ ಮರಳುಗಾಡಿನಲ್ಲಿ ಹುಟ್ಟಿ ಬೆಳೆಯುತ್ತಿರುವ ಮಕ್ಕಳಿಗೆ ಮೂಲ ಭಾಷೆ ಹಾಗೂ ಸಂಸ್ಕೃತಿಯನ್ನು ಮರೆಯದಂತೆ ಉಳಿಸಿ-ಬೆಳೆಸಿ ಬೆಳಗಿಸಲು ಕಾರಣವಾಗಿದೆ. ಇಂಥ ಮಹತ್ತರ ಕಾರ್ಯ ಸುಸೂತ್ರವಾಗಿ ಅಡೆತಡೆಗಳನ್ನು ದಾಟಿ, ಅಡಚಣೆಗಳನ್ನೆಲ್ಲಾ ಮೀರಿ ಸುಂದರ ಮರಳ ಮಲ್ಲಿಗೆಯಾಗಿ ಅರಳಲು ಕನ್ನಡ ಕೂಟದ ಎಲ್ಲ ಸದಸ್ಯರ ಪ್ರಯತ್ನ ಹಾಗೂ ಅರ್ಪಣಾ ಮನೋಭಾವ ಕಾರಣ ಎಂಬುದು ಎದ್ದು ಕಾಣುತ್ತದೆ. ಇತ್ತೀಚಿನ ಮೂರ್ನಾಲಕ್ಕು ವರ್ಷದ ಸಂಚಿಕೆಗಳಲ್ಲಿರುವ ಪರಿಣಾಮಕಾರಿ ಬರಹಗಳಲ್ಲಿ ಸಂಚಿಕೆಗಳ ವಿನ್ಯಾಸ ಪ್ರಶಂಸನೀಯ. ಈ ಎಲ್ಲದರ ಹಿಂದಿನ ರೂವಾರಿಗಳು ಮರಳ ಮಲ್ಲಿಗೆ ಸಂಚಾಲಕರು ಮತ್ತು ಅವರೊಂದಿಗೆ ಸಮರ್ಥವಾಗಿ ಕೈ ಜೋಡಿಸಿರುವ ಮರಳ ಮಲ್ಲಿಗೆ ಸಮಿತಿ ಸದಸ್ಯರು ಎಂದರೆ ತಪ್ಪಿಲ್ಲ. ಕರ್ನಾಟಕದಿಂದ ಹೊರಗಿದ್ದುಕೊಂಡು ತಮ್ಮ ಉದ್ಯೋಗ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು ಮರಳು ಗಾಡಿನ ಕನ್ನಡ ಜನತೆಗೆ ಕನ್ನಡ ಸಾಹಿತ್ಯದ ರಸದೂಟ ಬಡಿಸುತ್ತಿರುವುದಲ್ಲದೆ, ಕಲೆ ಸಾಹಿತ್ಯಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕನ್ನಡ ಸೇವೆ ಮಾಡುತ್ತಿರುವ ಕುವೈತ್ ಕನ್ನಡ ಕೂಟಕ್ಕೆ ಅನಂತ ಧನ್ಯವಾದಗಳು ಹಾಗೂ ಶುಭಾಷಯಗಳು.

ಜೈ ಕನ್ನಡಾಂಬೆ , ಜೈ ಕುವೈತ್ ಕನ್ನಡ ಕೂಟ...

**ಅಮೇರಿಕಾದಿಂದ ರಂಜಿತಾ ಸತೀಶ್..**

ಮರಳು ಗಾಡಿನಲ್ಲಿ ಕನ್ನಡಿಗರು ನೆಟ್ಟು ನೀರುಣಿಸಿ ಪ್ರೀತಿಯಿಂದ ಬೆಳೆಸಿದ ಕನ್ನಡದ ಕಂಪೇ ಈ ಮರಳ ಮಲ್ಲಿಗೆ ... ಈ ಮರಳ ಮಲ್ಲಿಗೆಯ ತಂಪು ಅಮೆರಿಕ, ಲಂಡನ್ ನಂತಹ ದೇಶಗಳಿಗೂ ಹರಡಿ ತನ್ನ ಕಂಪನ್ನ ಹರಡಿದೆ. ಈ ಎಲ್ಲಾ ಸಂಚಿಕೆಗಳ ರೂವಾರಿಯಾದ ಮರಳ ಮಲ್ಲಿಗೆ ಸಂಚಾಲಕರು ಮತ್ತು ಸದಸ್ಯರಿಗೆ ಧನ್ಯವಾದಗಳು. ಕೆಲಸದ ನಡುವೆಯೂ ಬಿಡುವು ಮಾಡಿಕೊಂಡು ಕನ್ನಡವನ್ನ ನಮ್ಮ ಸಾಹಿತ್ಯದ ಸವಿಯನ್ನ ಬೆಳೆಸುತ್ತಿರೋ

ಹಾಗೂ ಉಳಿಸುತ್ತಿರೋ ಕುವೈತ್ ಕನ್ನಡ ಕೂಟಕ್ಕೆ ಮತ್ತು ಕುವೈತ್‌ನ ಕನ್ನಡ ಜನತೆಗೆ ಧನ್ಯವಾದಗಳು ಹಾಗು ಶುಭಾಶಯಗಳು.

### ಪುಣೆಯಿಂದ ಚಿತ್ರಾಂಜಲಿ ಹೆಗಡೆ..

ಮರಳ ಮಲ್ಲಿಗೆ-ಕುವೈತ್ ನ ಮರಳುಗಾಡಿನಲ್ಲಿ ಅರಳಿದ ತುಂಬು ಪರಿಮಳದ ಹೂ! ಇದರಲ್ಲಿ ಎಲ್ಲಾ ಭಾವಗಳಿವೆ, ವೈವಿಧ್ಯವಿದೆ. ಎಲ್ಲಕ್ಕಿಂತ ಹೆಚ್ಚಾಗಿ ನಾಡಿನಿಂದ ಹೊರ ಬಂದರೂ, ಭಾಷೆಯೊಂದಿಗೆ ಬೆಸೆದಿರಬಯಸುವ ಜೀವಗಳ ತುಡಿತವಿದೆ. ಸಾಗರಗಳಾಚೆ ಇದ್ದರೂ ಕನ್ನಡವನ್ನು ತಮ್ಮೊಳಗೆ ಉಳಿಸಿಕೊಂಡು, ಮುಂದಿನ ಪೀಳಿಗೆಗೆ ಹಂಚಿ ಬೆಳೆಸಿಕೊಳ್ಳುವ ಹಂಬಲವಿದೆ. ಒಮ್ಮೆ ಮರಳ ಮಲ್ಲಿಗೆಯನ್ನು ತೆಗೆದು ಕಣ್ಣಾಡಿಸಿದರೆ ಅದರಲ್ಲಿ ಸುದ್ದಿಗಳ ಭಂಡಾರವೇ ಸಿಗುತ್ತದೆ ! ಕನ್ನಡದ ಬಗ್ಗೆ , ಕರ್ನಾಟಕದ ಬಗ್ಗೆ ಲೇಟೆಸ್ಟ್ ಸುದ್ದಿಗಳನ್ನು ಹಂಚಿ ಕೊಂಡಿರುತ್ತಾರೆ. ಅಡುಗೆ ಮನೆಯಿಂದ ಆಟದ ಅಂಗಳದವರೆಗೂ, ಕನ್ನಡ ಸಂಸ್ಕೃತಿಯ, ಸಾಹಿತ್ಯದ, ಸಾಹಿತಿಗಳ ಪರಿಚಯವಿದೆ, ಗಂಭೀರ ಚರ್ಚೆಯಿಂದ ನಗೆಹನಿಗಳವರೆಗೂ, ರಾಜಕೀಯದಿಂದ ಮಕ್ಕಳಾಟದವರೆಗೂ ಎಲ್ಲಾ ವಿಷಯಗಳೂ ಇದರಲ್ಲಿವೆ.

ತುಂಬು ಜತನದಿಂದ ಇಂಥಾ ಪುಸ್ತಕವನ್ನು ನಿಯಮಿತವಾಗಿ ಹೊರತರುವ ಮೂಲಕ ತಮ್ಮ ಕನ್ನಡಾಭಿಮಾನವನ್ನು ಮೆರೆಯುತ್ತಿರುವ ಕುವೈತ್ ಕನ್ನಡ ಕೂಟಕ್ಕೆ ನನ್ನ ಅಭಿನಂದನೆಗಳು ! ನಿಮ್ಮ ಇತ್ತೀಚಿನ ರಾಜ್ಯೋತ್ಸವದ ಫೋಟೋಗಳನ್ನು, ವಿಡಿಯೋಗಳನ್ನು ನೋಡಿ ಬಹಳ ಖುಷಿಯಾಯ್ತು. ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಬಹುಸುಂದರ ಪ್ರಯತ್ನ ಅದು! ಸಾಂಸ್ಕೃತಿಕ ಕಾರ್ಯಕ್ರಮಗಳು ಮಕ್ಕಳು ಮಾತ್ರವಲ್ಲದೆ ದೊಡ್ಡವರಿಗೂ ಸಂತಸ ತರುತ್ತವೆ ಎಂಬುದು ಭಾಗವಹಿಸಿದವರ ಮುಖಭಾವದಲ್ಲೇ ತಿಳಿಯುತ್ತಿತ್ತು. ನಾಟಕವಿರಲಿ, ನೃತ್ಯವಿರಲಿ, ಗಾಯನವಿರಲಿ ಆಸಕ್ತಿಗೆ ವಯೋಭೇದವಿಲ್ಲ ಅಲ್ಲವೇ? ಹೊರ ದೇಶದಲ್ಲಿದ್ದರೂ ಇಷ್ಟು ಸುಂದರವಾಗಿ ಇವೆಲ್ಲವನ್ನೂ ಆಯೋಜಿಸಿ, ಕನ್ನಡ ನಾಡಿಗೆ, ಕನ್ನಡದ ಸಾಹಿತ್ಯ ಲೋಕಕ್ಕೆ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸುವ ಮೂಲಕ ಇಡೀ ಕರ್ನಾಟಕಕ್ಕೇ ನಿಮ್ಮ ಪ್ರೀತಿಯನ್ನು ಹಂಚಿದ್ದೀರಾ. ಈ ನಿಮ್ಮ ಅಭಿಮಾನ ನಮ್ಮಲ್ಲೂ ಹೊಸ ಚೈತನ್ಯ, ಹೆಮ್ಮೆಯನ್ನು ಉಕ್ಕಿಸುತ್ತದೆ ! ಕುವೈತ್ ಕನ್ನಡ ಕೂಟ ಇನ್ನಷ್ಟು ಪ್ರಖರವಾಗಿ ಬೆಳಗಲೆಂದು ಮನದಾಳದಿಂದ ಹಾರೈಸುವೆ !

ಶುಭಾಶಯಗಳೊಂದಿಗೆ, ಚಿತ್ರಾ

### ದೆಹಲಿಯಿಂದ ಸೀತಾರಾಮ ಕೆಮ್ಮಣ್ಣು..

ಕುವೈತ್ ನಲ್ಲಿರುವ ಕನ್ನಡಿಗರೆಲ್ಲಾ ಸೇರಿ, ಕನ್ನಡನಾಡ ತಮ್ಮ ಬೇರಲ್ಲಿ ಹೀರಿದ, ಕನ್ನಡದ ಮಣ್ಣಿನ ಸಾರದ, ಉತ್ಕೃಷ್ಟತೆಯ ಸೊಗಡಾದ ಮಲ್ಲಿಗೆ ಮತ್ತು ಗಂಧದ ಕಂಪನ್ನು, ಕನ್ನಡನಾಡ ಸಾಹಿತ್ಯ -ಮತ್ತು ಸಾಂಸ್ಕೃತಿಕ ಹಿರಿಮೆಯನ್ನು, ಸದ್ಯ ತಮ್ಮ ಕಾರ್ಯಕ್ಷೇತ್ರವಾದ ಮರಳನಾಡಿನಲ್ಲಿ-ಕುವೈತ್ ಕನ್ನಡ ಕೂಟವನ್ನ ಕಟ್ಟುವ ಮೂಲಕ ಮತ್ತು ಅದರ ಮುಖಾಂತರ ಹೊರ ಹೊಮ್ಮುವ - ಹಬ್ಬ-ಹರಿದಿನ-ಕಾಲಮಾನ ವಿಶೇಷಗಳ ಸಮಾರಂಭದಲ್ಲಿ ಮತ್ತು ಮರಳ ಮಲ್ಲಿಗೆ ಎಂಬ ಅಂತರ್ಜಾಲ ತಾಣದ ಸುಂದರ ಮಾಸಿಕ ಪುಸ್ತಕದ ಮುಖಾಂತರ ಮೆರೆಯಿಸುತ್ತಿರುವದು, ಆರು ಕೋಟಿ ಕನ್ನಡಿಗರಿಗೆ ತುಂಬಾ ಹೆಮ್ಮೆಯ ಸಂಗತಿ.

ಅವರ ವೈವಿಧ್ಯಮಯ ಈ ಕನ್ನಡ ಸಂಸ್ಕೃತಿಯನ್ನ ಹೊರನಾಡಲ್ಲಿ ಸೂಸಿ ತಮ್ಮ ಬೇರ ಗುಣವನ್ನೂ ಮೆರೆಯಿಸುವ ಕ್ರೀಯಾಶೀಲತೆ ಸದಾ ಹಸಿರಾಗಿರಲಿ ಎಂದು ನನ್ನ ಹಾರೈಕೆ.

### ಮಂಗಳೂರಿನಿಂದ ದಿನಕರ್ ಮೊಗೇರ್..

"ನಾಡು, ನುಡಿ" ಎರಡನ್ನು ಹೇಳೋದು ತುಂಬಾ ಸುಲಭ.... ಅನುಭವಿಸೋದು ಕಷ್ಟ.... ಹಿತ್ತಲ ಗಿಡ ಮದ್ದಲ್ಲ ಎನ್ನುತ್ತಾರೆ... ಹಾಗೆಯೇ ಇಲ್ಲಿನವರಿಗೆ ನಾಡು ನುಡಿಯ ಬಗ್ಗೆ ಅನಾದರ ಇದ್ದೇ ಇದೆ.... ನಮಗೆ ಕನ್ನಡವೆಂದರೆ ನವೆಂಬರ್ ಹಬ್ಬ.... ಒಂದನೇ ತಾರೀಖಿನ ರಜೆ.... ನೀವೆಲ್ಲಾ ದೂರದಲ್ಲಿದ್ದೂ ನಾಡು, ನುಡಿಯ ಕಾಳಜಿ ವಹಿಸಿ ಅದನ್ನು ಮನೆಯ ಹಬ್ಬವಾಗಿ ಆಚರಿಸುತ್ತಿದ್ದೀರಿ.... ಕಾಟಾಚಾರಕ್ಕಾಗಿ ಮಾಡದೇ ಮನಸ್ಫೂರ್ತಿಯಾಗಿ ಆಚರಿಸುತ್ತಿದ್ದೀರಿ..... ಎಲ್ಲರನ್ನೂ ಸೇರಿಸಿ ನಿಜವಾಗಿಯೂ ನಾಡಹಬ್ಬವಾಗಿ ಆನಂದಿಸುತ್ತಿದ್ದೀರಿ..... ದೂರದಿಂದಿದ್ದರೇ ಪ್ರೀತಿ ಹೆಚ್ಚು ಎನ್ನುವುದನ್ನು ನಿರೂಪಿಸಿದ್ದೀರಿ.... ನೀವು ಹೊರಡಿಸುತ್ತಿರುವ "ಮರಳ ಮಲ್ಲಿಗೆ" ತುಂಬಾ ಚೆನ್ನಾಗಿ ಬರುತ್ತಿದೆ..... ನಿಮ್ಮೆಲ್ಲರ ಶ್ರಮ ನಿಮ್ಮ ಪತ್ರಿಕೆಯಲ್ಲಿ ಕಾಣಿಸುತ್ತದೆ.... ಇದರ ಕಂಪು ಇನ್ನಷ್ಟು ದೇಶಗಳಲ್ಲಿ ಪಸರಿಸಲಿ ಎಂದು ಹಾರೈಸುತ್ತೇನೆ....

### ಮೈಸೂರಿನಿಂದ ಬಾಲು..

ಕುವೈತ್ ಕನ್ನಡ ಕೂಟದ ಬಗ್ಗೆ ಹಾಗೂ ಅಲ್ಲಿನ ಚಟುವಟಿಕೆಗಳ ಬಗ್ಗೆ ವೆಬ್ ನಲ್ಲಿ ಮಾಹಿತಿ ತಿಳಿದೇ ತುಂಬಾ ಸಂತಸವಾಯಿತು. ಈ ದೇಶದಲ್ಲಿ ಹುಟ್ಟಿ ಜೀವನೋಪಾಯ ಪ್ರಯುಕ್ತ ಹೊರದೇಶಗಳಲ್ಲಿ ನೆಲೆಸಿದ್ದರೂ, ತಾಯ್ನಾಡಿನ, ದೇಶದ ಬಗ್ಗೆ ಚಿಂತಿಸುತ್ತಾ ಇಲ್ಲಿನ ಸಂಸ್ಕೃತಿಗಳನ್ನು ಅಲ್ಲಿ ಮೆರೆಸುತ್ತಾ ಭಾರತದ ತನುಜಾತೆ, ಕನ್ನಡ ತಾಯಿಯ ಹೆಮ್ಮೆಯ ಮಕ್ಕಳಾಗಿ ನೀವುಗಳು ಇರುವುದು ನಿಜಕ್ಕೂ ಹೆಮ್ಮೆಯ ವಿಚಾರ. ನೀವುಗಳು ಕುವೈತ್ ನಲ್ಲಿ ಕನ್ನಡ ಕೂಟ ರಚಿಸಿಕೊಂಡು ಅಲ್ಲಿ ಕನ್ನಡ ಭಾಷೆಯ ಹಾಗೂ ಸಂಸ್ಕೃತಿಯ ನಿತ್ಯ ಮೆರವಣಿಗೆ ಮಾಡುತ್ತಿರುವುದು ನಿಮ್ಮೆಲ್ಲರ ಹಿರಿಮೆ, ಹೃದಯ ವೈಶಾಲ್ಯತೆ ತೋರುತ್ತದೆ. ನೀವು ಹಮ್ಮಿ ಕೊಂಡಿರುವ ಕಾರ್ಯಕ್ರಮಗಳ, ಚಟುವಟಿಕೆಗಳ ಬಗ್ಗೆ ಛಾಯ ಚಿತ್ರಗಳನ್ನು, ವೀಡಿಯೋಗಳನ್ನೂ ನೋಡಿದೆ. ಪ್ರತೀ ಕಾರ್ಯಕ್ರಮದಲ್ಲಿ ಅಚ್ಚುಕಟ್ಟು, ವೈವಿಧ್ಯತೆಯಿಂದ ಕೂಡಿದ್ದು ಅದರಲ್ಲಿ ನಿಮ್ಮ ತಂಡದ ಸದಸ್ಯರು ತೊಡಗಿಸಿಕೊಂಡ ರೀತಿ, ಅದರ ಹಿಂದೆ ನಡೆಸಿದ ಯೋಜನೆ, ಅನುಷ್ಠಾನ ಹಾಗು ಎಲ್ಲಕ್ಕಿಂತ ಮುಖ್ಯವಾಗಿ ಇದು ನಮ್ಮ ಮನೆ ಕಾರ್ಯ ಎನ್ನುವ ಹಾಗೆ ಶ್ರಮ ಹಾಕಿ ನಾವೆಲ್ಲಾ ಒಂದೇ ಎಂಬ ಧೋರಣೆಯಿಂದ ನಿರ್ವಹಿಸಿರುವ ರೀತಿ ಇಷ್ಟವಾಗುತ್ತದೆ. ಇಲ್ಲೇ ಇದ್ದು ಕನ್ನಡ ನಾಡು ನುಡಿಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಇರುವ ಎಷ್ಟೋ ಜನರಿಗಿಂತ ನೆಲದ ಮಣ್ಣಿನಿಂದ ದೂರವಿದ್ದರೂ ಇಲ್ಲಿನ ಮಣ್ಣಿನ ಸಂಸ್ಕೃತಿಯನ್ನು ಅಲ್ಲಿ ಹರಡುವ ಕೆಲಸ ಹಾಗೂ ಅಲ್ಲಿ ನೆಲಸಿರುವ ಕನ್ನಡಿಗರ ಮಕ್ಕಳೇ ಆಗಿದ್ದರೂ ಈ ನಾಡನ್ನೆ ನೋಡದ ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯ ಶ್ಲಾಘನೀಯ.

ಇತ್ತೀಚಿಗೆ ನೀವುಗಳು ಆಚರಿಸಿರುವ ಕನ್ನಡ ರಾಜ್ಯೋತ್ಸವ ಹಬ್ಬದ ಯಶಸ್ಸು ನಿಮ್ಮೆಲ್ಲರ ಸಾಮೂಹಿಕ ಭಾಗವಹಿಸುವಿಕೆ, ಹಾಗೂ ಕೂಟದ ಆಡಳಿತ ಚುಕ್ಕಾಣಿ ಹಿಡಿದ ಎಲ್ಲರ ವಿಶೇಷತೆಯನ್ನು ತೋರಿಸಿದೆ. ಇನ್ನು "ಮರಳ ಮಲ್ಲಿಗೆ" ಎಂಬ ಪತ್ರಿಕೆಯ ಗರಿಯೂ ಕೂಡ ಕುವೈತ್ ಕನ್ನಡ ಕೂಟಕ್ಕೆ ಹೆಮ್ಮೆಯ ಗರಿಯೇ ಆಗಿ ಉತ್ತಮ ವಿಚಾರಗಳ ಸಂಕಲನವಾಗಿದೆ. ನಿಮ್ಮಲ್ಲಿ ಕೆಲವರು ಬ್ಲಾಗ್ ಬರಹಗಾರರಾಗಿ ಬ್ಲಾಗ್ ಮೂಲಕ ಹೆಚ್ಚಿನ ಸಂಪರ್ಕ ಹೊಂದಿರುವ ಕಾರಣ ವಿಶ್ವದಾದ್ಯಂತ ನಿಮ್ಮ ಕಾರ್ಯಕ್ರಮಗಳ ಮಾಹಿತಿ ತಲುಪುತ್ತಿದೆ. ನಿಮ್ಮದೊಂದು ವೆಬ್ ಸಮಿತಿ ಸಹ ಈ ನಿಟ್ಟನಲ್ಲಿ ಇರುವುದು ಖುಷಿ ಕೊಟ್ಟಿತು. ಹೆಮ್ಮೆಯ ಕುವೈತ್ ಕನ್ನಡ ಕೂಟ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡು ಇತರ ವಿದೇಶೀಯ ನೆಲದಲ್ಲಿರುವ ಕನ್ನಡ ಕೂಟಗಳಿಗೆ ಮಾದರಿಯಾಗಲಿ, ನಾಡಿನ ಕೀರ್ತಿ ಬೆಳಗಲಿ ಎಂದು ಪ್ರೀತಿಯಿಂದ ಹಾರೈಸುತ್ತೇನೆ. ಕೂಟದ ಎಲ್ಲಾ ಆಡಳಿತ ಮಂಡಳಿಯವರಿಗೆ, ಸದಸ್ಯರಿಗೆ ನನ್ನ ಶುಭಕಾಮನೆ, ಎಲ್ಲರಿಗೂ ಶುಭವಾಗಲಿ.

ಪ್ರೀತಿಯಿಂದ, ನಿಮ್ಮವ [ನಿಮ್ಮೊಳಗೊಬ್ಬಬಾಲು, ಮೈಸೂರು]

### ಬೆಂಗಳೂರಿಂದ ಉದಯೋನ್ಮುಖ ಚಲನ ಚಿತ್ರಗೀತ ಸಾಹಿತಿ ಮತ್ತು ಮಿತ್ರ: ಹೃದಯಶಿವ..

'ನಡುನಾಡೆ ಇರಲಿ ಗಡಿನಾಡೆ ಇರಲಿ ಕನ್ನಡದ ಕಳೆಯ ಕೆಚ್ಚೇವು' ಎಂಬುದು ಕನ್ನಡ ಕುವರ ಕವಿ ಡಿ.ಎಸ್.ಕರ್ಕಿಯವರ ಆಶಯ. ಆ ಮಾತು ಇಂದು ನಿಜವಾಗುತ್ತಿದೆ. ಅದಕ್ಕೆ ಸಾಕ್ಷಿ ಗಡಿನಾಡು ಮಾತ್ರವಲ್ಲ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಹೊರನಾಡಿನಲ್ಲಿ ಕನ್ನಡದ ಕಂಪು ಸೂಸುತ್ತಿರುವ 'ಕುವೈತ್ ಕನ್ನಡ ಕೂಟ' ಹಾಗೂ ಆ ಕೂಟದ ವತಿಯಿಂದ ಪ್ರಕಟಗೊಳ್ಳುತ್ತಿರುವ 'ಮರಳ ಮಲ್ಲಿಗೆ' ಎಂಬ ಸೊಗಸಾದ ಹೆಸರಿನ ಕನ್ನಡ ಪತ್ರಿಕೆ.

ಕನ್ನಡನಾಡಿನಲ್ಲಿದ್ದುಕೊಂಡೇ ಕನ್ನಡತನ ಕಳೆದುಕೊಳ್ಳುತ್ತಿರುವ, ಕನ್ನಡದಲ್ಲಿ ಮಾತನಾಡಲು ಹಿಂದೇಟು ಹಾಕುತ್ತಿರುವ ಇಂದಿನ ಸಂದರ್ಭದಲ್ಲಿ ದೂರದ ಅರಬ್ಬೀ ಕೋಟೆಯೊಳಗೆ, ಅಲ್ಲಿನ ಸಂಸ್ಕೃತಿಯ ನಡುವೆ ಕನ್ನಡ, ಕನ್ನಡಪರ ಚಿಂತನೆ, ಕನ್ನಡತನದ ದೀಕ್ಷೆಯನ್ನು ವ್ರತವಾಗಿ ಪಾಲಿಸುವ ಮನೋಧರ್ಮವಿದೆಯಲ್ಲ ಅದು ನಿಜಕ್ಕೂ ಕನ್ನಡಿಗರೆಲ್ಲ ಹೆಮ್ಮೆ ಪಡಬೇಕಾದ ಸಂಗತಿ.

'ಕುವೈತ್ ಕನ್ನಡ ಕೂಟ' ಇನ್ನೂ ಎತ್ತರಕ್ಕೆ ಬೆಳೆಯಲಿ. ಅದರ ಆಶ್ರಯದಲ್ಲಿ ಕನ್ನಡಪರ ಯೋಜನೆಗಳು ಮತ್ತಷ್ಟು ಜಾರಿಗೊಳ್ಳಲಿ. ಕನ್ನಡಮ್ಮನ ನೆರಳು ಸದಾ ಅವರ ಮೇಲಿರಲಿ.' ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂಬ ಕುವೆಂಪು ವಾಣಿಯನ್ನು ಸ್ಮರಿಸುತ್ತಾ ಮನದುಂಬಿ ಹಾರೈಸುತ್ತೇನೆ. ಜೈ ಕನ್ನಡ.

### ಬೆಂಗಳೂರಿನಿಂದ ಆರ್. ಮಣಿಕಾಂತ್..

ಮರಳ ಮಲ್ಲಿಗೆ ವಿಶೇಷ ಸಂಚಿಕೆಗೆ ಅಭಿಪ್ರಾಯ ರೂಪದಲ್ಲಿ ನಾಲ್ಕು ಮಾತು ಬರೆಯಲು ಅವಕಾಶ ಮಾಡಿಕೊಟ್ಟ ಸಂಪಾದಕೀಯ ಮಂಡಳಿಗೆ ಕೃತಜ್ಞತೆಗಳು. ಮರಳ ಮಲ್ಲಿಗೆ ಯ ಪ್ರತಿಯೊಂದು ಸಂಚಿಕೆಯಲ್ಲೂ ವಿಭಿನ್ನ ಕಥೆ,ಬರಹ,ಹನಿ,ಪ್ರಬಂಧದ ರೂಪದ ಬರಹಗಳಿವೆ. ಈ ಕಾರಣದಿಂದ ಎಲ್ಲಾ ಸಂಚಿಕೆಯಲ್ಲೂ ವೈವಿಧ್ಯತೆ ಕಾಣಲು ಸಾಧ್ಯವಾಗಿದೆ. ಕನ್ನಡ ಎಂಬುದು ಕರ್ನಾಟಕದಲ್ಲೇ ಹಲವರಿಂದ ಉಪೇಕ್ಷೆಗೆ ಒಳಗಾಗುತ್ತಿರುವ ಈ ದಿನಗಳಲ್ಲಿ, ಕುವೈತ್ ನ ಕನ್ನಡಿಗರು ಕನ್ನಡ ಪ್ರೇಮ ಮೆರೆಯುತ್ತಿರುವುದು ವಿಶೇಷವೇ ಸರಿ. ಇಂಥದೊಂದು ಬೆಳವಣಿಗೆಗೆ ಕಾರಣವಾದ ಮರಳ ಮಲ್ಲಿಗೆ ಸಂಚಿಕೆಯ ಬರಹಗಾರರಿಗೆ, ಸಂಪಾದಕೀಯ ಮಂಡಳಿಗೆ ಹಾಗೂ ಕುವೈತ್‌ನಲ್ಲಿರು ಸಮಸ್ತ ಕನ್ನಡ ಬಂಧುಗಳಿಗೆ ಪ್ರೀತಿ, ನಮಸ್ಕಾರ, ಕೃತಜ್ಞತೆ...
ಸಿರಿಗನ್ನಡಂ ಗೆಲ್ಗೆ,ಸಿರಿಗನ್ನಡಂ ಬಾಳ್ಗೆ...
ಮಣಿಕಾಂತ್, ಲೇಖಕ, ಪತ್ರಕರ್ತ, ವಿಜಯ ಕರ್ನಾಟಕ, ಬೆಂಗಳೂರು.

### ಬೆಂಗಳೂರಿನಿಂದ ಪ್ರಕಾಶ್ ಹೆಗ್ಗಡೆ..

ನಾವೆಲ್ಲಾ ಬದುಕಿನ ಹೋರಾಟದಲ್ಲಿ ಮುಳುಗಿ ಹೊಗಿದ್ದೇವೆ.. ನಮ್ಮ ಮನೆ, ಸಂಸಾರ ಮಕ್ಕಳು..ನಮ್ಮ ವೈಯಕ್ತಿಕ ಬದುಕಿನ ಸಮಸ್ಯೆಯಲ್ಲಿ.. ದೇಶ, ಭಾಷೆ.. ನಾಡು, ನುಡಿಯನ್ನು ಮರೆತು ಬಿಡುತ್ತಿದ್ದೇವೆ.. ನಮಗೆ ನಮ್ಮ ಪುಟ್ಟ ಬದುಕೇ ದೊಡ್ಡದು.. ದೇಶದ ಹೊರಗಿದ್ದು, ಮರಳುಗಾಡಿನಲ್ಲಿ ಕನ್ನಡ ಮಲ್ಲಿಗೆಯ ಕಂಪನ್ನು ಹರಡುತ್ತಿರುವ "ಕುವೈತ್ ಕನ್ನಡ ಕೂಟ" ಮತ್ತು ನಿಮ್ಮೆಲ್ಲ ಗೆಳೆಯರಿಗೆ ನಮ್ಮ ಶುಭ ಹಾರೈಕೆಗಳು..

ನಿಮ್ಮ ಚಟುವಟಿಕೆಗಳನ್ನು ನೋಡಿ..ಸಂತೋಷ, ಹೆಮ್ಮೆಯ ಜೊತೆಗೆ.. ಹೊಟ್ಟೆಕಿಚ್ಚು ಆಗುತ್ತಿದೆ.. ನಾವಿಲ್ಲಿ ಕನ್ನಡ ನಾಡಿನಲ್ಲಿ ಇದ್ದುಕೊಂಡು ಏನೂ ಮಾಡಲಾಗುತ್ತಿಲ್ಲ ಎಂದು.. "ಕುವೈತ್ ಕನ್ನಡ ಕೂಟ" ನಮಗೆಲ್ಲರಿಗೂ ಹೆಮ್ಮೆ ಮತ್ತು ಸ್ಫೂರ್ತಿ. "ಕುವೈತ್ ಕನ್ನಡ ಕೂಟ" ನಮ್ಮ ಕನ್ನಡ ಮನಸ್ಸುಗಳನ್ನು ಸೇರಿಸಲಿ. ಒಂದಾಗಿಸಲಿ. ನಮ್ಮ ನಾಡು, ನುಡಿಯ ಬಗೆಗೆ ಮುಂದಿನ ಪೀಳಿಗೆಗೆ ಮಾದರಿಯಾಗಲಿ.

ಜೈ ಭಾರತಾಂಬೆ.. ಜೈ ಕರ್ನಾಟಕ ಮಾತೆ.... ಜೈ ಹೋ!!

### ಬೆಂಗಳೂರಿನಿಂದ ಶ್ರೀಮತಿ ಜಯಲಕ್ಷ್ಮಿ ಪಾಟೀಲ್ (ಕಿರುತೆರೆ ನಟಿ)...

'ಮರಳ ಮಲ್ಲಿಗೆ' ಸಂಚಿಕೆಗಳನ್ನು ನೋಡಿ ನನಗನಿಸಿದ್ದು. ಇದು; ಮರುಳು ಮಾಡುವ 'ಮರಳ ಮಲ್ಲಿಗೆ'!
ಮರಳ ಮಲ್ಲಿಗೆಯ ಎಲ್ಲ ಸಂಚಿಕೆಗಳನ್ನು ನೋಡಿದಾಗ ನನಗೆ ಮಗುವೊಂದು ತೊದಲು ಹೆಜ್ಜೆ ಹಾಕುತ್ತಲೇ, ಎಲ್ಲ ವಿಷಯದಲ್ಲೂ ಆಸಕ್ತಿ ತೋರಿಸುತ್ತಾ (ಮೂಗು ತೂರಿಸುತ್ತಾ!), ಓಹೋ ಇಷ್ಟೇ ತಾನೆ ಇದು ಎನ್ನುವ ಹುಸಿ ಗತ್ತಿನೊಡನೆ ಗಮ್ಮತ್ತಾಗಿ, ಆರಾಮದಲ್ಲಿ ನಡೆದಾಡುವ, ನೆಗೆದಾಡುವ, ನೆಗೆದು ಮನೆಯ ಜಂತಿ ಮುಟ್ಟಿ ಹೆಮ್ಮೆ ಪಡುವ ತುಂಟ ಪೋರನನ್ನು ನೋಡುತ್ತಿದ್ದೇನೆ ಎನಿಸಿತು. ೧೪ ವರುಷಗಳ ಕಾಲ ಹೊರನಾಡ ಕನ್ನಡಿಗಳಾಗಿದ್ದ ನನಗೆ ನಿಮ್ಮಗಳ ಕನ್ನಡ ಸಂಭ್ರಮ ನನ್ನದೆನಿಸುತ್ತಿದೆ. 'ಮರಳ ಮಲ್ಲಿಗೆ'ಯಲ್ಲಿ ಬದುಕಿನ ಯಾವ ಮಗ್ಗುಲೂ ಬಿಡದಂತೆ ಹಿಡಿದಿಡುವ ನಿಮ್ಮಗಳ ಪ್ರಯತ್ನ ಖುಷಿ ಕೊಟ್ಟಿತು. ಹೊರದೇಶದಲ್ಲಿದ್ದು ಕನ್ನಡ ಕಲಿಕೆಯಿಂದ ದೂರವಾಗಬಹುದಾದ ಅಪಾಯವನ್ನು ತಪ್ಪಿಸಲು ಪತ್ರಿಕೆಯಲ್ಲಿ ಆ ಮಕ್ಕಳು ಇಂಗ್ಲೀಷ್‌ನಲ್ಲಿಯೇ ಬರೆಯುತ್ತಾ, ಕನ್ನಡದ ವಾತಾವರಣವನ್ನು, ಕನ್ನಡತನವನ್ನು ಮರೆಯದಂತೆ ನೋಡಿಕೊಳ್ಳುತ್ತಿರುವುದು ಶ್ಲಾಘನೀಯ! ಕನ್ನಡ ನಾಡಿನಲ್ಲಿರುವವರಿಗಿಂತ ಕನ್ನಡವನ್ನು ಕಾಪಾಡುವ, ಬೆಳೆಸುವ ಜವಾಬ್ದಾರಿ ಹೊರನಾಡ ಕನ್ನಡಿಗರಿಗೆ ಹೆಚ್ಚಿದೆ ಮತ್ತು ಇರಬೇಕಾದದ್ದೂ ಅವಶ್ಯ. ದೂರ ದೇಶದಲ್ಲಿದ್ದೂ 'ಮರಳ ಮಲ್ಲಿಗೆ' ಇ-ಪತ್ರಿಕೆಯ ಮೂಲಕ ಇಷ್ಟು ಹತ್ತಿರವಾದ ನಿಮಗೆಲ್ಲ ಮತ್ತು ಘಮ್ಮೆನ್ನುವ 'ಮರಳ ಮಲ್ಲಿಗೆ'ಯ ಒಂದೊಂದು ಹೆಜ್ಜೆಗೂ ಕಾರಣರಾದವರಿಗೆಲ್ಲ ಶುಭ ಹಾರೈಕೆ. ಈ ಪೋರ ಗಟ್ಟಿ ಅಂತಃಸತ್ವದೊಡನೆ ಬೆಳೆದು ಎಲ್ಲಾ ಎಲ್ಲಾ ಕನ್ನಡಿಗರನ್ನೂ ಮರುಳು ಮಾಡುವಂತಾಗಲಿ.

### ಬೆಂಗಳೂರಿನಿಂದ ಕೆ. ಶಿವು ...

"ಮರಳ ಮಲ್ಲಿಗೆ" ಎನ್ನುವ ಹೆಸರು ಕುವೈತಿನ ಮರಳಿಗೆ ಸಂಬಂಧಿಸಿದರೂ ಅದು ನಿಜಕ್ಕೂ ಕನ್ನಡ ಭಾಷೆಯ ಮಟ್ಟಿಗೆ "ಅರಳು ಮಲ್ಲಿಗೆ"ಯೇ ಸರಿ. ಏಕೆಂದರೆ ಅದರಲ್ಲಿ ವೈವಿದ್ಯಮಯ ಲೇಖನಗಳು, ಮಾಹಿತಿಗಳು, ಹಿರಿಯರಿಂದ ಮಕ್ಕಳಾದಿಯವರೆಗೆ ಬೇಕಾಗುವ ಉಪಯುಕ್ತ ಮಾಹಿತಿಗಳು, ಫೋಟೊಗ್ರಫಿ, ಕವನ, ಕತೆ ಇನ್ನೂ ಅನೇಕ ವಿಚಾರಗಳು ಈ ಮರಳ ಮಲ್ಲಿಗೆ ಪತ್ರಿಕೆಯಲ್ಲಿ ಪ್ರತಿ ತಿಂಗಳು ಹೊಸ ಹೊಸದಾಗಿ ಅರಳುತ್ತವೆ. ಹೀಗೆ ಅರಳಲು ಕಾರಣ ಕುವೈತ್ ಕನ್ನಡಿಗರ ನಿಸ್ವಾರ್ಥ ಕನ್ನಡ ಸೇವೆ. ಕರ್ನಾಟಕದ ಅನೇಕ ಪತ್ರಿಕೆಗಳು ನಮಗೆ ಸರಿಯಾಗಿ ತಲುಪದಿದ್ದರೂ ಕುವೈತ್‌ನಿಂದ ಈ ಇ-ಮರಳ ಮಲ್ಲಿಗೆ ಪ್ರತಿ ತಿಂಗಳು ನಮಗೆಲ್ಲ ಸರಿಯಾಗಿ ತಲುಪಿರುತ್ತದೆ. ಮತ್ತೆ ಯಾವುದೇ ರಾಜಕೀಯ, ಕ್ರೌರ್ಯ, ಕ್ರಿಮಿನಲ್, ಇನ್ನಿತರ ವಿಚಾರಗಳು ನಮಗೆ ಇಷ್ಟವಿಲ್ಲದಿದ್ದರೂ ಉಣಬಡಿಸಿ ತಮ್ಮ ಸರ್ಕುಲೇಷನ್ ಹೆಚ್ಚಾಗಿದೆ ಅಂತ ತಮ್ಮೊಳಗೆ ಬೆನ್ನು ತಟ್ಟಿಕೊಳ್ಳುವ ಇಂದಿನ ಪತ್ರಿಕೆಗಳ ದಿಕ್ಕಿನಲ್ಲಿ ಸಾಗದ ಒಂದು ಪರಿಶುದ್ದ ಪತ್ರಿಕೆ ಈ-ಮರಳ ಮಲ್ಲಿಗೆ. ಅದರ ಕನ್ನಡ ಸೇವೆಗೆ ನನ್ನ ಸಾವಿರ ನಮನಗಳು.

ಶುಭಾಶಯಗಳೊಂದಿಗೆ...ಶಿವು.ಕೆ


first manga made by a child!
comics for 10+ only!
enjoy this comic with romance and heart-felt moments!
One page comic!
Futago No Koi's
Twin Love!
Left to right
gloom
CLANK
Hey whatsup!
Morning!
Hey give it back!
No way Cristine!
Hey she has that manga again!
Let me see!
come on! give it back!
wait rite there
throw
whatz up bro
ugh I hate guys
Dont be so happy
well actually
seriously whats wrong with him?
Yesterday in the evening some one called him to the class then he changed his clothes and threw him out side He then went to the courtyard all of a sudden the fans came running towards him He satarted running n they started chasing him He came all the way to my home n that too at 12 am I dont know what exactly happened but this what I know When I saw him he was dressing like U no wonder the fans chased him You are really popular
CARTOON story by Suraiya Noor
The Twins
Negi Aizawa the younger twin
Nami Aizawa the elder twin
he he hah hah ...
Pfft
Why You little..!!
You should have looked at Ur face
Ha Ha Ha Ha
You little brat!
Aw Hehe my stomach Hurts!
Now stop fighting ....
look! they are fighting!
You should always drink milk


Photo by: Manuvachan


Rekha T. Shettigar


Rekha Shettigar